# ಸಿ.ಜಿ.ಕೆ.

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಆತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ. ನಾಡಿನ ಕೋಟಿ ಕೋಟಿ ಶ್ರೀಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು, ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸ ಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮಹತ್ವದ ಲೇಖಕರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ಸಾಹಿತ್ಯ ಮತ್ತು ಸಾಹಿತ್ಯೇತರವಾದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಲು ಪ್ರಸಾರೋಪನ್ಯಾಸಗಳನ್ನು ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡು ಅದರಂತೆ ಕಾರ್ಯನಿರ್ವಹಿಸುತ್ತಿದೆ. ಅತ್ಯಂತ ಸರಳವಾಗಿ ಈ ವಿಷಯಗಳನ್ನು ಕುರಿತು ಪರಿಚಯ ಮಾಡಿಕೊಡುವ ಈ ಉಪನ್ಯಾಸಗಳನ್ನು ಪುಸ್ತಕಗಳ ಮೂಲಕವಾಗಿ ಪ್ರಕಟಿಸುತ್ತಿದೆ. ಈ ಉಪನ್ಯಾಸ ಮಾಲೆ ಮತ್ತು ಅದರ ಉತ್ಪನ್ನಗಳಾದ ಈ ಚಿಕ್ಕ ಹೊತ್ತಿಗೆಗಳು ತುಂಬ ಜನಪ್ರಿಯವಾಗಿವೆ. ಈ ಮಾಲೆಯಲ್ಲಿ ಪ್ರಸ್ತುತ ಪುಸ್ತಕ ಪ್ರಕಟವಾಗುತ್ತಿದೆ.

'ಸಿ ಜಿ ಕೆ' ಎಂಬ ಕಿರುಹೊತ್ತಿಗೆಯನ್ನು ಈ ಮಂಟಪ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಎಲ್ ಹನುಮಂತಯ್ಯ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

(೧)

ಸಿ.ಜಿ. ಕೃಷ್ಣಸ್ವಾಮಿಯವರು ಸಿ.ಜಿ.ಕೆ. ಎಂದೇ ಖ್ಯಾತರಾಗಿದ್ದಾರೆ. ಕನ್ನಡ ರಂಗಭೂಮಿಯ ಕಳೆದ ಮೂರು ದಶಕಗಳಿಂದ ರಂಗಕರ್ಮಿಯಾಗಿ, ಸಂಘಟಕರಾಗಿ ಮುಖ್ಯವಾಗಿ ರಂಗಭೂಮಿ ನಿರ್ದೇಶಕರಾಗಿ ಪ್ರಖ್ಯಾತರಾಗಿದ್ದಾರೆ. ಕನ್ನಡ ರಂಗಭೂಮಿಯ ಅವರ ಸಮಕಾಲೀನ ನಿರ್ದೇಶಕರಿಗಿಂತಲೂ ಭಿನ್ನವಾದ ಆಲೋಚನೆ, ಪ್ರಯೋಗಗಳಿಂದ ವಿಶಿಷ್ಟ ನಿರ್ದೇಶಕರಾಗಿದ್ದಾರೆ. ನಾಟಕಗಳ ಆಯ್ಕೆಯಿಂದಲೇ ತಮ್ಮ ಆಸಕ್ತಿ ಕುತೂಹಲ ಮತ್ತು ಆಶಯಗಳನ್ನು ಪ್ರಕಟಪಡಿಸಿದವರು. ಇವರ ವಿಶೇಷತೆಯೆಂದರೆ ರಂಗಭೂಮಿಯಲ್ಲಿ ಬೆಳಕು ತಜ್ಞರಾಗಿ ಬಂದು ಯಶಸ್ವೀ ನಿರ್ದೇಶಕರೆಂದು ಹೆಸರು ಪಡೆದದ್ದು. ಬಾಲ್ಯದಿಂದಲೇ ಸಾಹಸಿ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಜೀವನವನ್ನು ಛಲವೆಂದು ಸ್ವೀಕರಿಸಿ ನಡೆಸುತ್ತಿರುವವರು. ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕ ಹುದ್ದೆಯಲ್ಲಿದ್ದುಕೊಂಡು ಕನ್ನಡ ರಂಗಭೂಮಿಯ ಅವಿನಾಭಾವ ವ್ಯಕ್ತಿತ್ವವಾಗಿ ರೂಪುಗೊಂಡಿದ್ದಾರೆ. ಸಿ.ಜಿ.ಕೆ.ಯನ್ನು ಹೊರತುಪಡಿಸಿ ಕನ್ನಡ ರಂಗಭೂಮಿಯ ಕಳೆದ ಮೂರು ದಶಕಗಳ ಚರಿತ್ರೆಯನ್ನು ಬರೆಯಲಾಗದು. ಸಿ.ಜಿ.ಕೆ. ಕನ್ನಡ ರಂಗಭೂಮಿಯನ್ನು ಕಟ್ಟಿದ ವ್ಯಕ್ತಿಗಳಲ್ಲಿ ಮುಖ್ಯರಾದವರಾಗಿದ್ದಾರೆ.

**೧. ಬಾಲ್ಯ, ವಿದ್ಯಾಭ್ಯಾಸ**

ಸಿ.ಜಿ.ಕೆ. ೨೭ ಜೂನ್ ೧೯೫೦ರಂದು ಮಂಡ್ಯ ನಗರದಲ್ಲಿ ಸಿ.ಎಸ್. ಗೋವಿಂದನಾಯ್ಕ್ ಮತ್ತು ತಿಮ್ಮಾಜಮ್ಮ ದಂಪತಿಗಳಿಗೆ ಐದು ಜನ ಅಕ್ಕಂದಿರ ಕೊನೇ ತಮ್ಮನಾಗಿ ಹುಟ್ಟಿದರು. ಮೈಶುಗರ್ ಕಂಪೆನಿಯಲ್ಲಿ ಸಹಾಯಕರಾಗಿದ್ದ ತಂದೆ ಸಿ.ಎಸ್. ಗೋವಿಂದನಾಯ್ಕ್ ಮಂಡ್ಯ ಜಿಲ್ಲೆಗೆ ಕಬ್ಬಿನ ಬೆಳೆಯನ್ನು ಪರಿಚಯಿಸಿದವರೆಂದರೆ ಆಶ್ಚರ್ಯವಾಗುತ್ತದೆ. ಗೋವಿಂದನಾಯ್ಕ್ ಅವರು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಕಲಿತಿದ್ದ ತೋಟಗಾರಿಕೆ ಮತ್ತು ಕೃಷಿ ಪಾಠಗಳಿಂದ ಕಬ್ಬಿನ ಬೆಳೆಯ ಬಗ್ಗೆ ವಿಶೇಷ ಆಸಕ್ತಿ ತಳೆದಿದ್ದವರು. ಮೈಶುಗರ್ ಕಂಪನಿಯ ಉದ್ಯೋಗಿಯಾಗಿ ಮಂಡ್ಯದಲ್ಲಿ ನೆಲೆಸಿದ್ದ ಕಾರಣ ಸ್ವಂತ ಸ್ಥಳವಾದ ಚಿತ್ರದುರ್ಗದ ಚಳ್ಳಕೆರೆಗಿಂತಲೂ ಮಂಡ್ಯದ ಜೊತೆಗೆ ತಮ್ಮ ಅವಿನಾಭಾವ ಸಂಬಂಧವನ್ನು ಗುರುತಿಸಿಕೊಂಡವರು. ಬಾಲ್ಯದಿಂದಲೇ ಪೋಲಿಯೋ ಖಾಯಿಲೆಗೆ ತುತ್ತಾದ ಮಗುವನ್ನು ಲಭ್ಯವಿದ್ದ ಎಲ್ಲ ಆಸ್ಪತ್ರೆಗಳಲ್ಲಿ ಸುತ್ತಾಡಿಸಲಾಯಿತು. ಆಗ ಕೆ.ಜಿ.ಎಫ್.ನಲ್ಲಿದ್ದ ದೊಡ್ಡಾಸ್ಪತ್ರೆಯಿಂದ ಮೈಸೂರಿನ ಮಿಷನ್ ಆಸ್ಪತ್ರೆಯವರೆಗೆ

ಪೋಲಿಯೋದಿಂದ ಪಾರುಮಾಡಲು ತಂದೆತಾಯಿಗಳ ಪರದಾಟ. ಮೈಸೂರಿನ ಮಿಷನ್ ಆಸ್ಪತ್ರೆಯ ಡಾ. ಟೋವಿ ದಂಪತಿಗಳವರ ಸೇವಾಮನೋಭಾವ ನನ್ನ ಜೀವನದ ಮೇಲೆ ತೀವ್ರ ಪ್ರಭಾವ ಬೀರಿತೆಂದು ಸಿಜಿಕೆ ಜ್ಞಾಪಿಸಿಕೊಳ್ಳುತ್ತಾರೆ. ವರ್ಷಗಳ ಕಾಲ ಆಸ್ಪತ್ರೆಯಲ್ಲೇ ಇರಬೇಕಾದ್ದರಿಂದ ಡಾ. ಟೋವಿ ದಂಪತಿಗಳು ಹಳ್ಳಿಗಾಡಿನ ಜನರನ್ನು ಪ್ರೀತಿ-ವಿಶ್ವಾಸಗಳಿಂದ ನೋಡಿಕೊಳ್ಳುತ್ತಿದ್ದುದೇ ನನ್ನಂಥವರ ಮನಸ್ಸಿನ ಮೇಲೆ ಪ್ರಭಾವ ಬೀರಲು ಕಾರಣವೆಂದು ಸಿಜಿಕೆ ನಂಬಿದ್ದಾರೆ. ಎರಡು ಕಾಲುಗಳ ಶಸ್ತ್ರಕ್ರಿಯೆಗೆ ಒಳಗಾಗಿ ಪೂರ್ಣವಾಗಿ ನಡೆಯಲು ಸಾಧ್ಯವಾಗದಿದ್ದ ಪರಿಸ್ಥಿತಿಯಿಂದ ಪಾರಾಗಿ, ಸ್ವಲ್ಪ ಮಟ್ಟಿಗೆ ಸುಧಾರಿಸಿದರು. ಈ ಸ್ಥಿತಿಯಲ್ಲೇ ವಿದ್ಯಾಭ್ಯಾಸವನ್ನು ಮಂಡ್ಯದ ಸೆಂಟ್ ಜೋಸೆಫ್ ಕಾನ್ವೆಂಟಿನಲ್ಲಿ ಪ್ರಾರಂಭಿಸಿದರು. ಮುಂದೆ ಮಂಡ್ಯದ ನೂತನ ಪ್ರಾಥಮಿಕ ಶಾಲೆಯಲ್ಲೇ ಓದನ್ನು ಮುಂದುವರಿಸಿದ ಸಿಜಿಕೆಯವರು, ತಮ್ಮ ಬಾಲ್ಯದ ವಿದ್ಯಾಭ್ಯಾಸದ ಅವಧಿಯಲ್ಲಿ ಮುಖ್ಯೋಪಾಧ್ಯಾಯರಾದ ಸಿದ್ಲಿಂಗಪ್ಪ ಅವರನ್ನು ಇಂದಿಗೂ ನೆನೆಯುತ್ತಾರೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಾಗಿದ್ದ ಇಂಗ್ಲಿಷ್ ಭಾಷೆಯನ್ನು ಸುಲಲಿತವಾಗಿ, ಆಪ್ತವಾದ ಧಾಟಿಯಲ್ಲಿ ಹೇಳಿಕೊಡುತ್ತಿದ್ದರು. ರೆನ್ ಅಂಡ್ ಮಾರ್ಟಿನ್ ಇಂಗ್ಲಿಷ್ ವ್ಯಾಕರಣ ಪಠ್ಯವನ್ನು ಪುಸ್ತಕ ನೋಡದೆಯೇ ಪಾಠ ಮಾಡುತ್ತಿದ್ದ ಶೈಲಿಯಿಂದಲೇ ನಮಗೆ ಇಂಗ್ಲಿಷ್ ಭಾಷೆಯನ್ನು ಸುಲಭವಾಗಿ ಕಲಿಯಲು ನೆರವಾಯಿತೆಂದು ನೆನಪಿಸಿಕೊಳ್ಳುತ್ತಾರೆ. ಮಂಡ್ಯದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿದ್ದ ವೆಂಕಟಸುಬ್ಬಯ್ಯನವರೂ ಕೂಡ ಸಿಜಿಕೆಯ ಅಚ್ಚುಮೆಚ್ಚಿನ ಅಧ್ಯಾಪಕರು. ಮಹಾಭಾರತದ ಪಠ್ಯವಾಗಿದ್ದ ಭಾಗಗಳನ್ನು ಹೇಳಿಕೊಡುವಾಗ ತನ್ಮಯರಾಗಿ ವಿಶೇಷ ಕರ್ಣಾಭಿಮಾನದಿಂದ ಪಾಠ ಹೇಳುತ್ತಿದ್ದುದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆಯೆಂದು ಜ್ಞಾಪಿಸಿಕೊಳ್ಳುತ್ತಾರೆ. ಎಸ್.ಎಸ್.ಎಲ್.ಸಿ. ಓದುತ್ತಿದ್ದಾಗ ದಕ್ಷಿಣ ಭಾರತದಲ್ಲಿ ಚಾಲ್ತಿಯಲ್ಲಿದ್ದ ಹಿಂದಿ ವಿರೋಧಿ ಚಳುವಳಿಯಲ್ಲಿ ಬಾಗವಹಿಸಿದ ಸಿಜಿಕೆ ಪೊಲೀಸರ ಲಾಠಿ ಏಟಿನ ರುಚಿಯನ್ನು ಬಾಲ್ಯದಲ್ಲೇ ಅನುಭವಿಸಿದರು. ಪೊಲೀಸರ ಏಟಿನಿಂದಾಗಿ ಪರೀಕ್ಷೆಯನ್ನು ಬರೆಯಲಾಗದೆ ಮನೆಯಲ್ಲೇ ಉಳಿಯಬೇಕಾಯಿತು. ಒಂದು ವರ್ಷದ ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಮುಗಿಸಿ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪಿಯುಸಿ ವಿದ್ಯಾಭ್ಯಾಸಕ್ಕೆ ಸೇರಿಕೊಂಡರು. ಸಿಜಿಕೆ ಕಾಲೇಜು ವಿದ್ಯಾಭ್ಯಾಸ ಪ್ರಾರಂಭಿಸುವ ದಿನಗಳಲ್ಲೇ ಸಮಾಜವನ್ನು ಅರ್ಥಮಾಡಿಕೊಳ್ಳುವ ಹೊಸ ಸಿದ್ಧಾಂತಗಳ ಪರಿಚಯವಾಗ ತೊಡಗಿತು. ನ್ಯಾಷನಲ್ ಕಾಲೇಜಿನ ಅಧ್ಯಾಪಕರಾದ ವೈ.ಎನ್. ರಮೇಶ್ ಮತ್ತು ಡಾ. ಜಿ. ರಾಮಕೃಷ್ಣ ಅವರುಗಳು ನಡೆಸುತ್ತಿದ್ದ ಭಾನುವಾರದ ಪಠ್ಯೇತರ ತರಗತಿಗಳೇ ನನಗೆ ಹೆಚ್ಚು ಪ್ರಿಯವಾಗುತ್ತಿದ್ದವು ಎನ್ನುತ್ತಾರೆ. ಪಠ್ಯೇತರ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ತಳೆದಿದ್ದ ನನಗೆ ಭಾನುವಾರದ ತರಗತಿಗಳು ಸಮಾಜವಾದ, ಕಮ್ಯುನಿಸ್ಟ್ ಚಿಂತನೆಗಳ ಕಡೆಗೆ ದಾರಿ ತೋರಿದ್ದು ನನ್ನ ಜೀವನದ ತಿರುವು ಎಂದು ಸಿಜಿಕೆ ಭಾವಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ ಚಟುವಟಿಕೆಯಿಂದಿದ್ದ ಸಿಜಿಕೆ ರಾಜಕೀಯವಾಗಿ ಕೂಡ ಆಸಕ್ತಿ ಬೆಳೆಸಿಕೊಂಡಿದ್ದರು. 'ಬೆಂಗಳೂರು ಯೂತ್' ಎಂಬ ಪತ್ರಿಕೆಯೊಂದನ್ನು ಎನ್.ವಿ. ಕೇಶವ ರೆಡ್ಡಿಯವರೊಡನೆ ಸೇರಿ ಪ್ರಕಟಿಸುತ್ತಿದ್ದರು. ವಿದ್ಯಾಭ್ಯಾಸಕ್ಕಿಂತಲೂ ಹೆಚ್ಚಾಗಿ ರಾಜಕೀಯ ಚಟುವಟಿಕೆಗಳಿಗೇ ಪ್ರಾಮುಖ್ಯ ನೀಡುತ್ತಿದ್ದ ಸಿಜಿಕೆಯವರಿಗೆ ಹೋರಾಟದ ಬಿಸಿ ತಟ್ಟಿದ್ದು; ಪ್ರೊ. ಗೋಪಾಲಕೃಷ್ಣ ಅಡಿಗರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ಚುನಾವಣೆಗೆ ಜನಸಂಘದಿಂದ ಸ್ಪರ್ಧಿಸಿದ್ದಾಗ ಎಂದು ನೆನಪಿಸಿಕೊಳ್ಳುತ್ತಾರೆ. ಆಗ ಪ್ರೊ. ಕ.ವೆಂ. ರಾಜಗೋಪಾಲ್ ಅವರಿಂದ ಲೇಖನವನ್ನು ಬರೆಸಿ ಬೆಂಗಳೂರು ಯೂತ್ ಪತ್ರಿಕೆಯಲ್ಲಿ ಮುದ್ರಿಸಲಾಯಿತು. "ಕವಿತೆಯನ್ನು ಸ್ವೀಕರಿಸಿ, ಕವಿಯನ್ನು ನಿರಾಕರಿಸಿ ಜರತಾರಿ ಜಗದ್ಗುರು ಅಡಿಗರನ್ನು ಧಿಕ್ಕರಿಸಿ" ಎಂಬ ಆಕರ್ಷಕ ಶೀರ್ಷಿಕೆಯಿಂದ ಮುದ್ರಿಸಲಾದ ಲೇಖನಕ್ಕೆ ಸಿಜಿಕೆ ತಮ್ಮ ಪ್ರಾಣವನ್ನು ಪಣ ಇಡಬೇಕಾಯಿತು. ಬೆಂಗಳರಿನ ಮಲ್ಲೇಶ್ವರ ಮೈದಾನದಲ್ಲಿ ವಾಜಪೇಯಿಯವರು ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದಾಗ ತಮ್ಮ ಪತ್ರಿಕೆಯನ್ನು ಹಂಚಲು ಹೋದ ಸಿಜಿಕೆಯವರನ್ನು ಥಳಿಸಲಾಯಿತು. ಸುಮಾರು ಹದಿನೈದು ದಿನಗಳ ಕಾಲ ಆಸ್ಪತ್ರೆಯಲ್ಲಿರಬೇಕಾಯಿತು. ಈ ಘಟನೆಯ ನಂತರ ಸಿಜಿಕೆಯವರಿಗೆ ಯಾವುದಾದರೂ ಪಕ್ಷ ಅಥವಾ ಸಂಘಟನೆಯ ಜೊತೆ ಗುರುತಿಸಿಕೊಳ್ಳುವ ಅನಿವಾರ್ಯತೆ ಉಂಟಾಯಿತು. ಬೆಂಗಳೂರಿನ ಕ್ರಾಂತಿಕಾರಿ ಬುದ್ಧಿಜೀವಿಗಳ ಸಹವಾಸ ಪ್ರಾಪ್ತವಾಯಿತು. ಸ್ನೇಹಿತರ ಒಡನಾಟದಿಂದ ಆಗ ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷದ ಸಂಪರ್ಕ ಬೆಳೆಯಿತು. ಚಟುವಟಿಕೆಯಿಂದಿದ್ದ ಸಿಜಿಕೆ ಯವರನ್ನು ಕೆ.ಎಸ್. ಚಂದ್ರಶೇಖರ್‌ರವರು, ಎನ್.ಎಸ್.ಯು.ಐ.ನ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದರು. ಹೀಗೆ ವಿದ್ಯಾರ್ಥಿಯಾಗಿದ್ದಾಗಲೇ ಸಕ್ರಿಯ ರಾಜಕೀಯ ಕಾರ್ಯಕರ್ತರಾಗಿದ್ದ ಸಿಜಿಕೆಯವರಿಗೆ ರಾಷ್ಟ್ರೀಯ ನಾಯಕರ ನೇರ ಸಂಪರ್ಕವುಂಟಾಯಿತು. ಕೆ.ವಿ. ರಘುನಾಥರೆಡ್ಡಿ,

ನಂದಿನಿ ಸತ್ಪಥಿ ಮುಂತಾದ ನಾಯಕರುಗಳ ಸಂಪರ್ಕವು ಸಿಜಿಕೆಯವರನ್ನು ಯುವ ಕಾಂಗ್ರೆಸ್ ನಾಯಕನನ್ನಾಗಿ ಮಾಡಿತು. ಬೆಂಗಳೂರಿನಲ್ಲಿ ಫ್ಯಾಸಿಸ್ಟ್ ವಿರೋಧಿ ಸಮಾವೇಶವನ್ನು ಸಂಘಟಿಸುತ್ತಿದ್ದಾಗ ಕಾಂಗ್ರೆಸ್‌ನಲ್ಲಿದ್ದ ಸಿಜಿಕೆಯವರಿಗೆ ವಿವಿಧ ರಾಜಕೀಯ ಪಕ್ಷಗಳ ಸಂಪರ್ಕ ದೊರೆಯಿತು. ಅದರಲ್ಲಿ ಬಹಳ ಮುಖ್ಯವಾದವರೆಂದರೆ ಆಗ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮ್ಯಾರ್ಕ್ಸಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ.ಕೆ.ಭಟ್ ಅವರು. ಅನೇಕ ಯುವಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಎಂ.ಕೆ.ಭಟ್ ಅವರು ಸಿಜಿಕೆಯವರ ಮೇಲೆ ತಮ್ಮ ವಿಚಾರಗಳಿಂದ ಪ್ರಭಾವ ಬೀರಿದ್ದರಿಂದ ಸಿಜಿಕೆ ಕಾಂಗ್ರೆಸ್ ಪಕ್ಷದಿಂದ ಕಮ್ಯುನಿಸ್ಟ್ ಸಿದ್ಧಾಂತದ ಕಡೆಗೆ ಒಲವು ತೋರುವಂತಾಯಿತು. ಆಗ ಸಿಜಿಕೆ ಎನ್.ಎಸ್.ಯು.ಐ.ನ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದರು. ಈ ವೇಳೆಗೆ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಪ್ರೊ. ಕೆ. ವೆಂಕಟಗಿರಿಗೌಡರ ಆಪ್ತಬಳಗದ ಶಿಷ್ಯರಲ್ಲಿ ಒಬ್ಬರಾದರು. ಬಡತನದಲ್ಲೇ ಹುಟ್ಟಿ ಎಂ ಎ ಪದವಿ ಪಡೆದು ತನ್ನ ತಾಯಿ ಪೂಜಿಸುತ್ತಿದ್ದ ಆದಿಶಕ್ತಿ ದೇವತೆಯ ಬಗೆಗೂ ಕುತೂಹಲ ಉಳಿಸಿಕೊಂಡು ಬೆಳೆದವರು. ತನ್ನ ತಾಯಿ ಕಟ್ಟಿಸಿದ ಆದಿಶಕ್ತಿ ದೇವಸ್ಥಾನಕ್ಕೆ ಪರಿಶಿಷ್ಟ ಜಾತಿಯ ಜವರಯ್ಯನನ್ನು ಪೂಜಾರಿಯಾಗಿ ನೇಮಕ ಮಾಡಿದ್ದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಆತನ ಸಂಸ್ಕೃತ ಪಾಂಡಿತ್ಯ ಮತ್ತು ಬ್ಲಾಕ್ ಮ್ಯಾಜಿಕ್ ವಿದ್ಯೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದವರು.

**೧. ಸಿಜಿಕೆಗೆ ರಂಗಭೂಮಿ ನಂಟು**

ಕರ್ನಾಟಕದ ಸಾಮಾಜಿಕ ವಾತಾವರಣ ಕ್ರಿಯಾಶೀಲವಾಗುತ್ತಿದ್ದ ಕಾಲದಲ್ಲಿ ಮಾರ್ಕಿಸ್ಟ್ ಕಮ್ಯುನಿಸ್ಟ್ ಪಕ್ಷದ ಸಾಂಸ್ಕೃತಿಕ ಗುಂಪಾಗಿದ್ದ ಸಮುದಾಯ ಸಂಘಟನೆ ವಿಚಾರವಂತ, ಬದ್ಧತೆಯುಳ್ಳ ನಟರ, ಚಿಂತಕರ ವೇದಿಕೆಯಾಗಿತ್ತು. ಎಂ.ಕೆ.ಭಟ್ ಅವರ ಪ್ರಭಾವದಿಂದ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಒಲವು ತೋರಿದ ಸಿಜಿಕೆ ಅವರು ಸಮುದಾಯದ ಸಕ್ರಿಯ ಸದಸ್ಯರಾದರು. ನಂತರ ಪೂರ್ಣಾವಧಿ ಕಾರ್ಯಕರ್ತರಾದರು. ವಿಚಾರಕ್ಕೆ ಹಚ್ಚುವ, ಬೌದ್ಧಿಕತೆಗೆ ಹೆಸರಾದ ನಾಟಕಗಳನ್ನು ಪ್ರದರ್ಶನ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದ ಸಮುದಾಯ ಸಂಘಟನೆಯನ್ನು ಸಂಘಟಿಸುವ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾರಂಬಿಸಿದರು. ಇದರ ಫಲವಾಗಿ ಸಮುದಾಯ ಸಾಂಸ್ಕೃತಿಕ ಜಾಥಾ ಸಂಘಟಿಸಲಾಯಿತು. ಬೀದರ್‌ನಿಂದ ಧಾರವಾಡಕ್ಕೆ ಒಂದು ತಂಡ ಜಾಥಾ ಮೂಲಕ ಬಂದರೆ, ಕೆಜಿಎಫ್‌ನಿಂದ ಧಾರವಾಡಕ್ಕೆ ಮತ್ತೊಂದು ತಂಡ ಬಂದಿತು. ಬೀದರ್‌ನಿಂದ ಹೊರಟ ತಂಡಕ್ಕೆ ಸಿಜಿಕೆ ನೇತೃತ್ವ ವಹಿಸಿದರೆ ಕೆಜಿಎಫ್‌ನಿಂದ ಪ್ರಾರಂಭವಾದ ತಂಡವನ್ನು ಪ್ರಸನ್ನ ಮುನ್ನಡೆಸಿದರು. ಇಂತಹ ಸಾಂಸ್ಕೃತಿಕ ಜಾಥಾದ ಸಂಘಟನೆಗಾಗಿ ಆರ್ಥಿಕ ಸಂಪನ್ಮೂಲಗಳನ್ನು ರೂಪಿಸಿಕೊಳ್ಳಲು ಸಿಜಿಕೆ ಹೊಸ ಯೋಜನೆಯೊಂದನ್ನು ರೂಪಿಸಿ ಶುಭಾಶಯ ಪತ್ರಗಳ ಮೂಲಕ ಹಣ ಸಂಗ್ರಹಿಸಿದರು. ಭಾರತದ ಸಾಂಸ್ಕೃತಿಕ ಜಾಥಾಗಳಲ್ಲಿ ಇದೊಂದು ಪ್ರಮುಖ ಜಾಥಾ ಎಂದು ದೇಶದ ಎಲ್ಲ ಸಾಂಸ್ಕೃತಿಕ ತಜ್ಞರು ಗುರುತಿಸುತ್ತಾರೆ. ಈ ಜಾಥಾ ಕರ್ನಾಟಕದ ಹಲವು ಹತ್ತು ಕ್ರಿಯಾಶಾಲಿಗಳನ್ನು ಸಾಹಿತ್ಯ, ಸಂಸ್ಕೃತಿ, ರಾಜಕೀಯ ಕ್ಷೇತ್ರಕ್ಕೆ ತಂದಿತು ಎನ್ನಬಹುದು. ಇಂದಿಗೂ ಸಿಜಿಕೆಯ ಅಪಾರವಾದ ರಂಗ ಅನುಭವಕ್ಕೆ ಈ ಜಾಥಾ ಒದಗಿಸಿದ ಅನುಭವವೇ ಕಾರಣ ಎನ್ನುತ್ತಾರೆ. ಅವರ ರಂಗಜೀವನ ಪ್ರಾರಂಭವಾದದ್ದೇ ಸಮುದಾಯದ ಮೂಲಕ. ಸಾಂಪ್ರದಾಯಕ ಥಿಯೇಟರ್‌ನಿಂದ ನಾವು ಜನಸಮೂಹವನ್ನು ತಲುಪಬಹುದೆ? ಕಲಾಮಾಧ್ಯಮದ ಮೂಲಕ ಜನಸಾಮಾನ್ಯರ ಹೃದಯಮುಟ್ಟಿ ಹೊಸ ಚಿಂತನೆಗೆ ಅವರನ್ನು ಹಚ್ಚುವುದು ಸಾಧ್ಯವೇ? ಎಂದು ಸಿಜಿಕೆ ಯೋಚಿಸತೊಡಗಿದರು. ಕಲಾಕ್ಷೇತ್ರದ ನಾಟಕ ಪ್ರದರ್ಶನದಿಂದ ಪ್ರಯೋಜನವಾಗುವುದಿಲ್ಲ. ಮಧ್ಯಮ ವರ್ಗದ ಪ್ರೇಕ್ಷಕರು ನಮ್ಮ ಉದ್ದೇಶಗಳಿಗೆ ಸ್ಪಂದಿಸಲಾರರು ಎಂದು ತೀರ್ಮಾನಿಸಿ ಬೀದಿನಾಟಕದ ಕಡೆಗೆ ತಮ್ಮ ಚಿಂತನೆಯನ್ನು ಹರಿಯಬಿಟ್ಟರು. ಬೆಂಗಳೂರು ನಗರದ ಕೊಳಗೇರಿಗಳಲ್ಲಿ ಈ ನಾಟಕಗಳ ಪ್ರದರ್ಶನ ಮಾಡುವ ಮೂಲಕ ನಮ್ಮ ಚಿಂತನೆಗಳನ್ನು ಕೆಳವರ್ಗದ ಜನರ ನಾಡಿಗಳಲ್ಲಿ ಬಿತ್ತಬೇಕೆಂದು ತೀರ್ಮಾನಿಸಿದರು. ಇದಕ್ಕಾಗಿ 'ಸಮುದಾಯ' ಸಂಘಟನೆಯನ್ನೇ ತೊಡಗಿಸಿ, ಸಮುದಾಯದಲ್ಲಿ ಮೊದಲ ಬಾರಿಗೆ ಕೆಳವರ್ಗ, ಕೆಳಜಾತಿಗಳ ನಟರೂ ಪಾಲ್ಗೊಳ್ಳುವಂತೆ ಮಾಡಿದರು. ಬೀದಿನಾಟಕದ ವಸ್ತು ಸಮಕಾಲೀನ ಸಮಸ್ಯೆಗಳೇ ಆಗಿರುತ್ತಿದ್ದವು. ಬಿಹಾರ ರಾಜ್ಯದ ಬೆಲ್ಚಿ ಗ್ರಾಮದಲ್ಲಿ ಕೂಲಿಕಾರರನ್ನು ಜಮೀನ್ದಾರರು ಜೀವಂತ ಸುಟ್ಟು ಹಾಕಿದ್ದ ವಸ್ತುವನ್ನೇ ನಾಟಕ ಮಾಡಿದರು. ಆರ್.ವಿ. ಟೀಚರ್ಸ್ ಕಾಲೇಜಿನಲ್ಲಿ ತಾಲೀಮು ನಡೆಸಲು ಅವಕಾಶ ದೊರೆತು ಸುತ್ತಮುತ್ತಲಿನ ಕೊಳಗೇರಿ ಬಾಲಕರನ್ನು

ನಟರನ್ನಾಗಿ ತಯಾರು ಮಾಡಿದರು. ಹನ್ನೆರಡು ಜನ ನಟರಲ್ಲಿ ಎಂಟು ಜನ ನಟರು ಕೊಳೆಗೇರಿಗಳಿಂದ ಬಂದವರಾಗಿದ್ದರು. ಬೆಂಗಳೂರಿನ ಅನೇಕ ಕೊಳೆಗೇರಿಗಳಲ್ಲಿ ಪ್ರದರ್ಶನ ನಡೆಯಿತು. ಈ ನಾಟಕ ದೇಶದ ಮೂಲೆ ಮೂಲೆಗಳಲ್ಲಿ ಅಭಿನಯಿಸಲ್ಪಟ್ಟು ಬೀದಿ ನಾಟಕದ ಹೊಸ ಆವಿಷ್ಕಾರಕ್ಕೆ ಮುನ್ನಡೆ ಇಟ್ಟಿತು. ಈ ನಾಟಕ ಅಚ್ಚಾಗದೆ ಅಂದು ಭಾರತದ ಎಲ್ಲ ಭಾಷೆಗಳಲ್ಲೂ ಅಭಿನಯಿಸಲ್ಪಟ್ಟಿತು ಎಂಬುದೇ ಈ ನಾಟಕದ ಹೆಗ್ಗಳಿಕೆ. ಮದರಾಸಿನ ಮೇರಿನಾ ಬೀಚಿನಿಂದ ಕಲ್ಕತ್ತಾದ ಇಡನ್ ಗಾರ್ಡನ್ ತನಕ ಪ್ರದರ್ಶನಕೊಟ್ಟು ದೇಶದ ಬೀದಿ ರಂಗಭೂಮಿಯಲ್ಲಿ ಸಿಜಿಕೆ ಹೆಸರು ಶಾಶ್ವತವಾಯಿತು. ಸಿಜಿಕೆಯವರ ಪ್ರಯತ್ನದಿಂದಾಗಿ ಕವಿ ಸಿದ್ಧಲಿಂಗಯ್ಯ ಬರೆದ 'ಪಂಚಮ' ನಾಟಕವು ಸುಮಾರು ಒಂದು ಸಾವಿರ ಪ್ರದರ್ಶನ ಕಂಡಿದೆ. ಈ ಯಶಸ್ಸಿನಿಂದ ಸಮುದಾಯ ಸಂಘಟನೆಯು ಹೊಸ ಚಿಂತನೆಗೆ ಅರ್ಪಿಸಿಕೊಳ್ಳುವಂತೆ ಮಾಡಿದ ಕೀರ್ತಿ ಸಿಜಿಕೆಯವರದು.

ಸಿಜಿಕೆಯವರೇ ಹೇಳುವಂತೆ ಕನ್ನಡ ರಂಗಭೂಮಿಯಲ್ಲಿ ಯಾವ Theme ಇಲ್ಲವಾಗಿದೆಯೋ ಅದನ್ನು ಹುಡುಕುವುದೇ ನನ್ನ ಆಸೆಯಾಗಿದೆ ಎನ್ನುತ್ತಾರೆ. ಕೆಲವು ವರ್ಷಗಳ ನಂತರ ಸಿಜಿಕೆ ಸಮುದಾಯವನ್ನು ತ್ಯಜಿಸಿ ರಂಗಸಂಪದ ಎಂಬ ರಂಗತಂಡವನ್ನು ಸೇರಿ ನಿರ್ದೇಶನವನ್ನು ಮುಂದುವರಿಸಿದರು. ಸಮುದಾಯವನ್ನು ಬಿಡಲು ಕೆಲವು ವೈಯಕ್ತಿಕ ಕಾರಣಗಳಾದರೆ, ಸೈದ್ಧಾಂತಿಕವಾಗಿಯೂ ಭಿನ್ನದಾರಿಯಲ್ಲಿ ಆಲೋಚಿಸಲು ತೊಡಗಿದೆ ಎನ್ನುತ್ತಾರೆ. ಅಂದರೆ ನಮ್ಮ ನೆಲ ಮೂಲ ಸಂಸ್ಕೃತಿಯಿಂದ ಹುಟ್ಟಿದ ಪರಿಕಲ್ಪನೆ ನಾವು ಯೋಚಿಸಲಿಲ್ಲವೇಕೆ ಎಂಬುದು ಅವರ ಚಿಂತನೆ ಆಗಿದೆ. ಉದಾಹರಣೆಗೆ ಕನಕನ ಪರಿಕಲ್ಪನೆ, ನಮ್ಮವರೇ ಆದ ಸಂಸ ಮುಂತಾದವರನ್ನು ಕುರಿತು ನಾಟಕ ಮಾಡುವುದು ನನ್ನ ಆಶಯಗಳಲ್ಲಿ ಒಂದಾಯಿತು. ರಂಗಸಂಪದದ ಮೂಲಕ ಬಿ.ವಿ. ವೈಕುಂಠರಾಜು ಅವರ 'ಸನ್ನಿವೇಶ'ವನ್ನು ಇಬ್ಬರೂ ಕೂಡಿ ನಿರ್ದೇಶಿಸಿದರು. ವೇಶ್ಯೆಯ ಸಮಸ್ಯೆಯನ್ನು ರಂಗದ ಮೇಲೆ ತಂದು ಹೊಸರೀತಿಯ ನಾಟಕವೆಂದು ಹೆಸರು ಮಾಡಿದ 'ಸನ್ನಿವೇಶ' ನಾಟಕವು ರಂಗಭೂಮಿಯಲ್ಲೊಂದು ಮೈಲಿಗಲ್ಲು. ಪ್ರೊಸೀನಿಯಂ ರಂಗಭೂಮಿಯಲ್ಲಿ ಮುಖ್ಯ ಘಟ್ಟವಾಗಿ ನಿಲ್ಲುವ ಈ ನಾಟಕದಿಂದ ಹೊಸರೀತಿಯ ಚರ್ಚೆ ಆರಂಭವಾಯಿತು. ಕನ್ನಡ ರಂಗಭೂಮಿ ಆ ಸಂದರ್ಭಗಳಲ್ಲಿ ಎರವಲು ನಾಟಕಗಳಿಗೆ ಸೀಮಿತವಾಗಿದ್ದ ಕಾಲದಲ್ಲಿ ನಮ್ಮ ನೋವಿನ ನೆಲೆಗಳನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಬೇಕೆಂದು ಹಂಬಲಿಸಿದರು. ಇದರ ಫಲವಾಗಿ ಸಿಜಿಕೆಯನ್ನು ಕಾಡಿದ್ದು ದೇವನೂರು ಮಹಾದೇವ ಅವರ 'ಒಡಲಾಳ' ಕಾದಂಬರಿ. 'ಒಡಲಾಳ' ಕಾದಂಬರಿಯನ್ನು ನಾಟಕವನ್ನಾಗಿ ಮಾಡುವುದು ಸಾಧ್ಯವೇ ಇಲ್ಲವೆಂದು ಪ್ರಸಿದ್ಧ ವಿಮರ್ಶಕರು, ಸಾಹಿತಿಗಳು ಹೇಳಿದಾಗ ಸಿಜಿಕೆ ಅದನ್ನು ಸವಾಲಾಗಿ ಸ್ವೀಕರಿಸಿದರು. ಕಾದಂಬರಿಯನ್ನು ತಾವೇ ರಂಗರೂಪಕ್ಕೆ ತಂದರು. ಕನ್ನಡ ರಂಗಭೂಮಿ ಈವರೆಗೆ ಕಾಣದ ಯಶಸ್ಸು ಒಡಲಾಳ ನಾಟಕದ್ದಾಯಿತು. ಕನ್ನಡ ನಾಟಕಕ್ಕೆ ಬರೆಯಲಾಗದಷ್ಟು ವಿಮರ್ಶೆ, ಗುಣಾತ್ಮಕವಾಗಿ ಮತ್ತು ಪ್ರಮಾಣಾತ್ಮಕವಾಗಿ ಒಡಲಾಳ ನಾಟಕಕ್ಕೆ ಬಂದಿತ್ತು. ಇಂದಿಗೂ ಈ ದಾಖಲೆಯನ್ನು ಯಾವ ನಾಟಕವೂ ಕೂಡ ಸರಿಗಟ್ಟಲಿಲ್ಲ ಎಂಬುದನ್ನು ಗಮನಿಸಲೇಬೇಕು. ಒಡಲಾಳದ ಕೇಂದ್ರ ಪಾತ್ರವಾದ ಸಾಕವ್ವನಾಗಿ ನಟಿಸಿದ ರಂಗನಟಿ ಉಮಾಶ್ರೀ ಕನ್ನಡ ರಂಗ ಭೂಮಿಯಲ್ಲೇ ದೈತ್ಯ ಪ್ರತಿಭೆಯಾಗಿ ಕಾಣಿಸಿಕೊಂಡರು. ಅಲ್ಲಿಂದ ಚಿತ್ರನಟಿಯಾಗಿ ಚಿತ್ರರಂಗಕ್ಕೆ ಪ್ರವೇಶ ಪಡೆದರು. ಒಡಲಾಳ ನಾಟಕದ ಯಶಸ್ಸಿನ ನಂತರ ಸಿಜಿಕೆ ಆಯ್ಕೆ ಮಾಡಿಕೊಂಡ ಒಂದೊಂದು ನಾಟಕದ ಹಿಂದೆ ವಿಶಿಷ್ಟ ಉದ್ದೇಶವಿದೆ. ಖ್ಯಾತ ಲೇಖಕರು ರಂಗಭೂಮಿಗೆ ಬಂದು, ನಾಟಕಕಾರರಾದರು.

ಮೌಖಿಕ ಪರಂಪರೆಗೆ ಹೆಸರಾದ ಪ್ರೊ. ಕೀರಂ ನಾಗರಾಜ ಅವರು ಸಿಜಿಕೆಯವರಿಗೆ ವಿಶೇಷವಾಗಿ ಎರಡು ನಾಟಕಗಳನ್ನು ಬರೆದುಕೊಟ್ಟಿದ್ದು ಸಾಧನೆಯೇ ಸರಿ. ಇವರ 'ನೀಗಿಕೊಂಡ ಸಂಸ', ನಾಟಕ ಎಂಥಹ ನಿರ್ದೇಶಕನಿಗಾದರೂ ಅಪ್ರತಿಮ ಸವಾಲೇ. ಕ್ಷಣ ಮಾತ್ರದಲ್ಲಿ ಸಂಸ ಕವಿಯಾಗಿ, ಕ್ಷಣ ಮಾತ್ರದಲ್ಲಿ ವಿಕ್ರಮರಾಯನಾಗಿ ರಂಗದ ಮೇಲೆ ತಂದ ಸಿಜಿಕೆಯ ರಂಗತಂತ್ರ, ಇಂದಿಗೂ ಸಿದ್ದ ರಂಗತಂತ್ರಜ್ಞರಿಗೆ ಸವಾಲೇ ಆಗಿದೆ. ಇನ್ನು 'ಕಾಲಜ್ಞಾನಿ ಕನಕ' ನಾಟಕ ನಮ್ಮ ಕಾಲಕ್ಕೆ ಪ್ರಸ್ತುತವಾಗಿ ರೂಪುಗೊಂಡಿರುವ ನಾಟಕ. ಯುದ್ಧ ಅಹಿಂಸೆ ತ್ಯಜಿಸಿ ಹರಿಭಕ್ತ ಪರಂಪರೆಗೆ ಸೇರಿದ ಕನಕನ ನಾಟಕ ನಮ್ಮ ಇಂದಿನ ಕ್ರಿಯಾಶೀಲ ಲೇಖಕರಿಗೆ ಹೇಗೆ ಭೂತವನ್ನು ವರ್ತಮಾನವನ್ನಾಗಿಸಬಹುದು ಎಂಬುದಕ್ಕೆ ಸ್ಪಷ್ಟ ಸಾಕ್ಷಿ. ವಾದಿರಾಜರು ಮತ್ತು ಪುರಂದರರ ಅಂತಹ ಶೋಧ ಕೂಡ ಕನಕನ ನಾಟಕದ ಮೂಲಕ ಪ್ರತಿಬಿಂಬಿತವಾಗಿದೆ. ಹೀಗೆ ನಮ್ಮ ಪರಂಪರೆಯನ್ನು ಸಮಕಾಲೀನ ಸಂದರ್ಭದಲ್ಲಿ ನಿಂತು ಎದುರು ನೋಡುವ ಹೊಸ

ಕುತೂಹಲ ಈ ನಾಟಕದಲ್ಲಿದೆ. ಈ ರೀತಿಯ ಅನ್ವೇಷಣೆಯಲ್ಲೇ ಸಿಜಿಕೆ ತಮ್ಮ ರಂಗಜೀವನವನ್ನು ನಿರ್ದೇಶಕರಾಗಿ ಮುಂದುವರಿಸಿದರು. ವಚನ ಚಳುವಳಿಯನ್ನು ಭಿನ್ನ ದೃಷ್ಟಿಕೋನದಿಂದ ನೋಡಿದ ನಾಟಕ 'ಮಹಾಚೈತ್ರ' ಕವಿ ಎಚ್.ಎಸ್. ಶಿವಪ್ರಕಾಶ್ ಸಿಜಿಕೆ ಯವರಿಂದಲೇ ಈ ನಾಟಕ ಬರೆದರು. ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ ಮುಂತಾದ ವಚನಕಾರರ ಮೂಲಕ ಬಸವ ಚಳುವಳಿಯ ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವ ಪ್ರಯತ್ನವೇ 'ಮಹಾಚೈತ್ರ'. ಸುಮಾರು ಎಪ್ಪತ್ತೈದು ನಟರ ಜೊತೆ ಅದ್ದೂರಿ ರಂಗಪ್ರಯೋಗವಾಗಿ ಮೂಡಿಬಂದ 'ಮಹಾಚೈತ್ರ' ನಾಟಕ ಕನ್ನಡ ನಾಟಕಗಳಲ್ಲಿ ವಿಶಿಷ್ಟವಾದದ್ದು. ಇದೇ ವಸ್ತುವನ್ನು ಒಳಗೊಂಡ ಲಂಕೇಶರ 'ಸಂಕ್ರಾಂತಿ', ಗಿರೀಶ್ ಕಾರ್ನಾಡರ 'ತಲೆದಂಡ' ನಾಟಕಗಳಿಗಿಂತ ಭಿನ್ನದೃಷ್ಟಿಯಿಂದ ನೋಡುವ ಪ್ರಯತ್ನ ಇಲ್ಲಿ ನಡೆದಿದೆ. ಆದ್ದರಿಂದಲೇ ಸಿಜಿಕೆಯವರ ನಾಟಕಗಳ ಆಯ್ಕೆಯೇ ಅವರ ಮೂಲಭೂತ ಕಾಳಜಿಗಳನ್ನು ತಿಳಿಸುತ್ತದೆ.

ಶಿವಪ್ರಕಾಶ್ ಬರೆದ 'ಸುಲ್ತಾನ್ ಟಿಪ್ಪು' ನಾಟಕ ಕೂಡ ಐತಿಹಾಸಿಕವಾಗಿ ಮಹತ್ವ ಪಡೆದಿದೆ. ಮೈಸೂರನ್ನು ಆಳಿದ ಟಿಪ್ಪು ಅನೇಕ ರೀತಿಯಲ್ಲಿ ಕುತೂಹಲಕರ ವ್ಯಕ್ತಿತ್ವವುಳ್ಳವನು. ಅಲ್ಪ ಸಂಖ್ಯಾತನೆಂಬ ಸಾಂಪ್ರದಾಯಿಕ ನಂಬಿಕೆಯಿಂದ ಟಿಪ್ಪುವನ್ನು ನಾವು ಅಧ್ಯಯನ ಮಾಡುವ ಪ್ರಯತ್ನ ಮಾಡಲಿಲ್ಲ. ಅಂತಹ ಶೋಧಗಳ ಮೂಲಕ ಹೊಸ ದರ್ಶನವನ್ನು ಕಾಣಬೇಕಾಗಿದೆ ಎಂದು ನಂಬಿದ ಸಿಜಿಕೆ 'ಸುಲ್ತಾನ್ ಟಿಪ್ಪು' ನಾಟಕ ನಿರ್ದೇಶಿಸಿ ಅನೇಕ ಪ್ರಯೋಗಗಳನ್ನು ಮಾಡಿದರು. ಕನ್ನಡ ರಂಗಭೂಮಿಯಲ್ಲಿ ಈ ರೀತಿಯ ಶೋಧಗಳನ್ನು ಏಕೆ ಈವರೆಗೆ ಮಾಡಲಾಗಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಕಷ್ಟಕರವಾದದ್ದು. ಆದರೂ ನಾವೀಗ ಉತ್ತರ ಕಂಡುಕೊಳ್ಳಬೇಕಾದ ಅನಿವಾರ್ಯ ಸಂದರ್ಭದಲ್ಲಿದ್ದೇವೆ. ಆದ್ದರಿಂದಲೇ ಸಿಜಿಕೆ ನಮ್ಮ ನಡುವಿನ ಸಾಂಸ್ಕೃತಿಕವಾಗಿ ಮಹತ್ವ ಪಡೆದ ರಂಗ ನಿರ್ದೇಶಕರಾಗಿದ್ದಾರೆ.

ಸಂಸ ನಾಟಕವು ಅತ್ಯುತ್ತಮ ತಾಂತ್ರಿಕತೆಯಿಂದ ಕೂಡಿದ ನಾಟಕವೆಂದು ಪ್ರಸಿದ್ಧವಾಗಿದೆ. ಇಂಡಿಯಾದ ರಂಗನಿರ್ದೇಶಕರಿಗೆ ಸವಾಲಾಗುವಂತಹ ನಾಟಕವೆಂದೇ ಖ್ಯಾತಿ ಪಡೆದಿದೆ. ಕನ್ನಡ ರಂಗಭೂಮಿ ಸಿಜಿಕೆಯವರ ನಿರ್ದೇಶನದಿಂದಲೇ ಪ್ರತ್ಯೇಕ ದಾರಿಯೊಂದರಲ್ಲಿ ಹೆಜ್ಜೆ ಹಾಕಿದೆ. ಸಾಕವ್ವ, ಸಂಸ, ಕನಕ, ಟಿಪ್ಪು, ವಚನಕಾರರು ಮುಂತಾದವರನ್ನು ನೋಡಿದರೆ ವಿಶೇಷತೆ ಕಾಣುತ್ತದೆ. ಸಾಕವ್ವನೆಂಬ ದಲಿತ ಲೋಕದ ಪ್ರತಿಮೆಯನ್ನು ರಂಗದ ಮೇಲೆ ತಂದದ್ದನ್ನು ನೋಡಿದರೆ ಪ್ರತಿಭಾವಂತ ನಿರ್ದೇಶಕ ಮಾತ್ರ ಇಂತಹ ಕೆಲಸ ಮಾಡಲು ಸಾಧ್ಯ ಅನ್ನಿಸುತ್ತದೆ. ತನ್ನ ಮಕ್ಕಳನ್ನೇ ಅಡವಿಟ್ಟ ದೇಶಪ್ರೇಮಿ ಟಿಪ್ಪು, ಮುಸ್ಲಿಂ ಎಂಬ ಕಾರಣಕ್ಕಾಗಿಯೇ ನಾವು ಕಡೆಗಣಿಸಿದ್ದೇವೆ. ಶರೀಫ, ಸರ್ವಜ್ಞರಂತಹ ಲೋಕಚಿಂತಕರ ಬಗ್ಗೆ ನಮ್ಮಲ್ಲಿ ನಾಟಕಗಳಿಲ್ಲ. ಅಂತಹ ಶೋಧನಾ ಮಾರ್ಗದಲ್ಲಿ ನಡೆದ ರಂಗನಿರ್ದೇಶಕರಾದ್ದರಿಂದ ಸಿಜಿಕೆ ಮುಖ್ಯರಾಗುತ್ತಾರೆ. ಯಾರು ಬೇಕಾದರೂ ರಂಗನಿರ್ದೇಶಕರಾಗಬಹುದು. ಆದರೆ ಸಿಜಿಕೆಯ ಯಶಸ್ಸಿನ ಗುಟ್ಟೇನೆಂದರೆ ಬಸವನಿಲ್ಲದ ಕಲ್ಯಾಣದ ಬಗ್ಗೆ ಯೋಚಿಸುವುದು, ದೇಶಕ್ಕಾಗಿ ಮಕ್ಕಳನ್ನು ಅಡವಿಟ್ಟು ರಾಜನ ಬಗ್ಗೆ ಯೋಚಿಸುವುದು, ಎಲ್ಲವನ್ನು ತ್ಯಜಿಸುವ ಸತ್ವಶಾಲಿ ಶಕ್ತಿಯನ್ನು ಹುಡುಕಾಡುವುದು. ಹೀಗಾಗಿ ಇವರ ಹುಡುಕಾಟ ಅನೇಕ ಮೂಲ ಸಂಸ್ಕೃತಿಯನ್ನೇ ಪರಿಚಯಿಸಿದ ಕೀರ್ತಿ ಇವರದು. ಕವಿ ಎಸ್.ಜಿ. ಸಿದ್ಧರಾಮಯ್ಯ ಹಾಗೂ ನನ್ನಂಥ ಕವಿಯನ್ನು ಸಕಾರಾತ್ಮಕವಾಗಿ ರಂಗಭೂಮಿಗೆ ಎಳೆತಂದಿದ್ದು, ಕವಿ ಹಾಗೂ ರಂಗಭೂಮಿಗೂ ಇರುವ ಪುರಾತನ ನಂಟನ್ನು ನವೀಕರಿಸಲು ಹೊರಟ ಪ್ರಯತ್ನವೇ ಎಂದು ಹೇಳಬಹುದು. ಇವರು ರೂಪಸಿದ ಅಂಬೇಡ್ಕರ್ ನಾಟಕ (ನಾನು ಬರೆದದ್ದು) ದಿನ ದಿನಕ್ಕೂ ಪಡೆಯುತ್ತಿದ್ದ ಹೊಸ ರೂಪವನ್ನು ನೋಡಿ ನಾನು ಅವಕ್ಕಾಗಿದ್ದೇನೆ. ರಂಗ ಚಿಂತನೆ, ರಂಗ ಚಾಲನೆಗೆ ದಿನ ಪಡೆದುಕೊಳ್ಳುವ ರೂಪ ಆಕೃತಿಗಳು ಎಂಥಹ ಪ್ರಸಿದ್ದ ಲೇಖಕನನ್ನು ಕ್ಷಣ ಕ್ಷಣಕ್ಕೂ ಹುರಿದುಂಬಿಸಿ ಮತ್ತೊಂದು ರೂಪ ಕೊಡಲು ಮುನ್ನುಗ್ಗುವಂತೆ ಮಾಡುತ್ತದೆ.

**೩. ಲೇಖಕ / ಕಲಾವಿದರು ಕಂಡಂತೆ**

ಸಿಜಿಕೆಯನ್ನು ಹತ್ತಿರದಿಂದ ಬಲ್ಲ ನಾಟಕಕಾರರು, ಕವಿಕಲಾವಿದರು ತಾವು ಕಂಡಂತೆ ಚಿತ್ರಸಿದ್ದಾರೆ. ಈ ಚಿತ್ರಗಳೆಲ್ಲವೂ ಸತ್ಯ. ಆದರೆ ಒಂದನ್ನೊಂದು ಹೋಲುವುದಿಲ್ಲ. ವಿವಿಧ ಮುಖಗಳನ್ನು ಕಂಡವರು ತಾವು ಕಂಡ ಮುಖವೇ ಸತ್ಯವೆಂದು ಭಾವಿಸಿದ್ದರೆ ಅದೂ ಕೂಡ ತಪ್ಪಲ್ಲ. ಸಿಜಿಕೆಯವರ ಪ್ರೋತ್ಸಾಹದಿಂದ ಪುಟಿದು ನಾಟಕಕಾರರಾದ ಎಲ್ಲರ ಅಭಿಪ್ರಾಯ ಒಂದೇ. ಸಿಜಿಕೆಯಲ್ಲಿ ಅದೃಶ್ಯ ಮುಖವೊಂದಿದೆ.

ಅದರ ಪರಿಚಯ ರಂಗದ ಮೇಲೆ ಮಾತ್ರವೇ ಎಂದು ಹೇಳುತ್ತಾರೆ. ಅವರ ಅಭಿಪ್ರಾಯಗಳ ಸಿಜಿಕೆಯವರನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಹಾಯವಾಗುತ್ತದೆಂಬ ಕಾರಣದಿಂದ ಇಲ್ಲಿ ವಿವರಿಸಲಾಗಿದೆ.

"ಅವನು ಯಾವ ರಂಗ ತರಬೇತಿಯನ್ನೂ ನಾಟಕ ಸಂಸ್ಥೆಗಳಲ್ಲಿ ಪಡೆದವನಲ್ಲ. ಅಕಾಡೆಮಿಕ್ ಆದ ಶಿಸ್ತೆಂದರೆ ನಕ್ಕುಬಿಡುತ್ತಾನೆ. ಅವನ ಹತ್ತಿರ ಸಿದ್ಧವಾದ ಸಿದ್ಧಾಂತಗಳಿಲ್ಲ. ನಾಟಕ ಕೈಗೆತ್ತಿಕೊಂಡಾಗ ಏನು ಮಾಡಬೇಕೋ ಅವನಿಗೆ ಗೊತ್ತಿರುವುದಿಲ್ಲ. ಪೂರ್ವಗ್ರಹಿಕೆಯಿಂದ ಅಕಾಡೆಮಿಕ್ ಶಿಸ್ತಿನಿಂದ ಹೊರಡುವವರು ತಪ್ಪು ಮಾಡುವುದಿಲ್ಲ. ಆದರೆ ಅವರು ಜೀವ ತುಡಿಯುವ ಏನನ್ನೂ ಕೊಡಲಾರರು. ಕೃಷ್ಣಸ್ವಾಮಿ ಪೂರ್ತಿ ತನ್ನ Animal Instinet ನಿಂದಲೇ ಕೆಲಸಮಾಡುವುದರಿಂದ ಒಡ್ಡೊಡ್ಡಾದ ರೀತಿಯಲ್ಲೇ ಜೀವಂತ ಪವಾಡ ತರುತ್ತಾನೆ."

ಇವನನ್ನು ಕಂಡಾಗ ನನಗೆ ಪುಸ್ತಕದ ಬದನೆಕಾಯಿಯಾಗಿದ್ದ ಅನೇಕ ವಿಚಾರಗಳು ಜೀವಂತವಾಗುತ್ತವೆ. ಜಾನ್ ಮತ್ತು ಜನ್ ಕಲಾವಿದರ ಬಗ್ಗೆ ಓದಿದ್ದೆ. ಅವರಿಗೂ ವ್ಯವಸ್ಥಿತವಾದ ಶಿಸ್ತಿನಲ್ಲಿ ನಂಬಿಕೆಯಿರಲಿಲ್ಲವಂತೆ. ಇಂಥ ಒಬ್ಬ ಚಕ್ರವರ್ತಿಗಾಗಿ ಹುಲಿಯ ಚಿತ್ರ ಬಿಡಿಸಿದ ಕಲಾವಿದ. ಚಿತ್ರ ಕಂಡ ಕೂಡಲೇ ಚಕ್ರವರ್ತಿ ಮೂರ್ಛೆ ಹೋದ. ಎಚ್ಚರವಾದ ಮೇಲೆ, ನಾನು ಕೇಳಿದ್ದು ಹುಲಿಯನ್ನಲ್ಲ, ಅದರ ಚಿತ್ರವನ್ನು ಎಂದ. ಕಲಾವಿದ ಹೇಳಿದ. ಅದು ಹುಲಿಯಲ್ಲ, ಚಿತ್ರ. ಇದನ್ನು ಹೇಗೆ ರಚಿಸಿದೆ? ಚಕ್ರವರ್ತಿಯ ಪ್ರಶ್ನೆ. ಅದಕ್ಕೆ ಕಲಾವಿದನ ಉತ್ತರ, 'ನಾನು ಹುಲಿಯನ್ನು ಕಂಡು ಎಷ್ಟೋ ವರ್ಷಗಳಾಗಿವೆ. ನಾನು ಚಿತ್ರ ಬರೆಯಲು ಕೂತಾಗ ನನ್ನನ್ನು ಖಾಲಿ ಮಾಡಿಕೊಳ್ಳುತ್ತೇನೆ. ಚಿತ್ರ ತನ್ನನ್ನು ಬರೆಸಿಕೊಳ್ಳುತ್ತದೆ."

-ಬಹುಶಃ ಕೃಷ್ಣಸ್ವಾಮಿ ಆ ಚೀನಾದ ಕಲಾವಿದನ ಪುನರಾವತಾರವಿರಬಹುದು. ತಾನು ಕಾಣದ, ಜಗತ್ತು ಕಾಣದ ಅನುಭವ ಅರಸುವಿಕೆಯಲ್ಲಿ ಅವನಿದ್ದಾನೆ.

ಹೀಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವವರು ನಾಟಕಕಾರ ಎಚ್. ಎಸ್. ಶಿವಪ್ರಕಾಶ್. 'ಮಹಾಚೈತ್ರ' ನಾಟಕವನ್ನು ನನ್ನಿಂದ ಬರೆಸಿದ್ದು ಸಿಜಿಕೆ, ವಚನಕಾರರು ನನ್ನಂತರಂಗದಲ್ಲಿ ತಾರಾಡುತ್ತಿದ್ದಾಗ ಅವರನ್ನು ರಂಗದ ಮೇಲೆ ತಂದು ಬಸವಣ್ಣನ ನಂತರದ ವಚನ ಕ್ರಾಂತಿಯ ಪರಿಣಾಮಗಳನ್ನು ಪರಿಣಾಮಕಾರಿಯಾಗಿ ರಂಗದ ಮೇಲೆ ತಂದ ಸಿಜಿಕೆ ಪ್ರತಿಭೆಯನ್ನು ಚೀಣಾದ ಕಲಾವಿದನಿಗೆ ಹೋಲಿಸಿ, ಇದರಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲವೆಂದು ತಿಳಿಸಿದ್ದಾರೆ. ಕನ್ನಡದ ಗಂಭೀರ ವಿಮರ್ಶಕರಲ್ಲಿ ಒಬ್ಬರಾದ ಜಿ ರಾಜಶೇಖರ್ ಸಮುದಾಯ ಸಂಘಟನೆ ಕಟ್ಟುವಾಗ ಸಿಜಿಕೆಯ ಜೊತೆಯಲ್ಲಿ ಕೆಲಸ ಮಾಡಿದವರು. ಸೈದ್ಧಾಂತಿಕವಾಗಿ ನಾಟಕದ ನಿರ್ದೇಶಕನೊಬ್ಬ ಕಟ್ಟುನಿಟ್ಟಾಗಿರಬೇಕಿಲ್ಲ. ಆದರೆ ಸಿಜಿಕೆಯಂತಹ ಕಲಾವಿದರು ಸಿದ್ಧಾಂತವನ್ನೂ ಅರ್ಥೈಸಿಕೊಂಡಿರುವ ಬಗೆ ಹೇಗೆಂದು ರಾಜಶೇಖರ್ ಅವರು ತಮ್ಮದೇ ಮಾತುಗಳಲ್ಲಿ ಹೀಗೆ ಹೇಳಿದ್ದಾರೆ:

"ಸಿಜಿಕೆ ಸಮಾಜವಾದದ ಸಿದ್ಧಾಂತ ಎಷ್ಟು ಓದಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾವು ಯಾವತ್ತೂ ಆ ಬಗ್ಗೆ ಮಾತಾಡಿದವರೇ ಅಲ್ಲ! ವಾದ, ಸಿದ್ಧಾಂತ ಎಲ್ಲ ಅವರಿಗೆ ಮಹಾಬೋರು ಎಂದು ನನ್ನ ಗುಮಾನಿ. ಅವರದ್ದು ಒಂದು ನಮೂನೆಯ ಹುಂಬ ಸಮಾಜವಾದ 'ಎಲ್ಲರಿಗೂ ನ್ಯಾಯ ಸಿಗಬೇಕು; ಬಡವರ ಕಷ್ಟ ನೀಗಬೇಕು. ಈ ಬಗೆಯದ್ದು". ನಮ್ಮ ಎಡ ರಾಜಕೀಯದ ಉತ್ಸಾಹದ ಆ ದಿನಗಳಲ್ಲಿಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ.ಕೆ. ಭಟ್ ಅವರನ್ನು ಪಕ್ಷದ ಸದಸ್ಯತ್ವದಿಂದಲೇ ಕಿತ್ತು ಹಾಕಿದ್ದರು. ಭಟ್ಟರು ನಮಗೆ ಇಬ್ಬರಿಗೂ ಆತ್ಮೀಯರು. ಸಿಜಿಕೆ ಒಮ್ಮೆ ಆ ಘಟನೆಯನ್ನು ಪ್ರಸ್ತಾಪಿಸುತ್ತಾ 'ನಿನ್ನೆಯವರೆಗೆ ಕಾಮ್ರೆಡ್, ಇವತ್ತು ಎನಿಮಿ ಎಂದರೆ ಅದನ್ನು ಹ್ಯಾಗೆ ಸಾರ್ ಒಪ್ಪಿಕೊಳ್ಳುವುದು? ಎಂದು ನನ್ನನ್ನು ಪ್ರಶ್ನೆ ಮಾಡಿದರು. ಪ್ರಶ್ನೆ ಎಂದರೆ ಬರೇ ಪ್ರಶ್ನೆ. ಅದರಲ್ಲಿ ವ್ಯಂಗ್ಯ, ಟೀಕೆ ಏನೂ ಇರಲಿಲ್ಲ. ಸಿಜಿಕೆಯಂತಹ ಹುಂಬರಿಗೆ ಮಾತ್ರ ಇಂತಹ ಪ್ರಶ್ನೆಗಳು ತಲೆದೋರುವುದು ಎಂದು ನನಗೆ ಅನ್ನಿಸಿತು. ಪಕ್ಷದ ಸದಸ್ಯರು ಯಾರೂ ಇಂತಹ ಪ್ರ|ಶ್ನೆಗಳನ್ನು ಕೇಳುವ ಅಶಿಸ್ತು ತೋರುವುದಿಲ್ಲ.

ಆಮೇಲೆ ಒಮ್ಮೆ ಸಿಜಿಕೆ ಮತ್ತು ನಾನು ಬೆಂಗಳೂರಿನಲ್ಲಿ ನಿರಂಜನರ ಮನೆಗೆ ಹೋಗಿದ್ದೆವು. ನಿರಂಜನರ ಆರೋಗ್ಯ ಆಗ ತುಂಬ ಕೆಟ್ಟಿತ್ತು. ಅವರ ಕೈ ಬೆರಳುಗಳು ಕೂಡ ಅವರ ಸ್ವಾಧೀನದಲ್ಲಿ ಇರಲಿಲ್ಲ. ನಿರಂಜನ ನಮ್ಮನ್ನು ತುಂಬ ಆತ್ಮೀಯತೆಯಿಂದ ಸ್ವಾಗತಿಸಿದರು. ಚಹಾ ಮಾಡಿಸಿಕೊಟ್ಟರು. ನಾವು ಚಹಾ ಕುಡಿಯುತ್ತಿದ್ದಂತೆ. ನಿರಂಜನ, ತಮ್ಮ ನಡುಗುವ ಕೈಗಳಿಂದ ಸ್ವಲ್ಪ ಚಹ ಮೈಮೇಲೆ ಚೆಲ್ಲಿಕೊಂಡರು. ಅದರಿಂದ ಅವರಿಗೆ ಕಿರಿಕಿರಿಯಾಯಿತು. ಅವರೊಬ್ಬರೇ ಇದ್ದಾಗ ಹಾಗೆ ಆಗಿದ್ದರೆ ಅವರು ಅದನ್ನು ಅಷ್ಟು ಹಚ್ಚಿ ಕೊಳ್ಳುತ್ತಿರಲಿಲ್ಲ ಎಂದು ಅನ್ನಿಸಿ ನನಗೆ ಬೇಸರವಾಯಿತು. ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ, ಆ ಭೇಟಿಯಲ್ಲಿ ನನಗೆ ಈಗ ನೆನಪಿರುವುದು ಇಷ್ಟು ಮಾತ್ರ. ನಾನು ಮತ್ತು ಸಿಜಿಕೆ ನಿರಂಜನರ ಜೊತೆ ಅವತ್ತು ತುಂಬ ಹೊತ್ತು ಸಮಾಜವಾದ, ಪ್ರಗತಿಶೀಲ ಸಾಹಿತ್ಯ, ರಷ್ಯಾ ಇತ್ಯಾದಿಗಳ ಬಗ್ಗೆ ಮಾತಾಡಿದೆವು... ಅದೆಲ್ಲದರ ಬಗ್ಗೆ ಈಗ ಬರೆಯುವುದೆಂದರೆ ಸುಮ್ಮನೆ ಮಾತಿನ ಗಾಣ ಸುತ್ತುವುದು. ಇದು ಪೊಳ್ಳಾಗಿಯೇ ಕಾಣುತ್ತದೆ. ಆದರೆ ಆ ಸಂದರ್ಭದಲ್ಲಿ ನನಗೆ ದೊರೆತ ಸಿಜಿಕೆಯ ಗೆಳೆತನ ಮಾತ್ರ ನನಗೆ ದಕ್ಕಿದ ದೊಡ್ಡ ಲಾಭವೆಂದು ನಾನು ತಿಳಿದಿದ್ದೇನೆ.

ರಾಜಶೇಖರ್ ಅವರು ನೀಡಿದ ಎರಡು ನಿದರ್ಶನಗಳಲ್ಲಿ ಸಿಜಿಕೆ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿಯೂ, ಹೃದಯವಂತಿಕೆಯನ್ನು ಪಕ್ಷಕ್ಕಿಂತ ಮೊದಲು ಎಂದು ತಿಳಿದವರೆಂಬುದು ಕಾಣುತ್ತದೆ. ಇಲ್ಲಿ ಕೂಡ ಸಿಜಿಕೆಯವರ ಕೆಲವು ಮುಖಗಳು ಹೇಗೆ ಭಿನ್ನವಾದುವು ಎಂಬ ಬಗೆಗೆ ಮಾಹಿತಿಯನ್ನು ಕಾಣಬಹುದು.

ನಾಡಿನ ಹಿರಿಯ  ಕವಿಗಳಾದ ತುಮಕೂರಿನ ವೀ. ಚಿಕ್ಕವೀರಯ್ಯನವರ ಮನೆಗೆ ಒಮ್ಮೆ ಸಿಜಿಕೆ ಹೋದಾಗ, ಬೆಂಗಳೂರಿಗೆ ಹುಡುಕಿಕೊಂಡು ಹೋದರೂ ಸಿಗದಿರುವ ಈ ನಿರ್ದೇಶಕ ನಮ್ಮ ಮನೆಗೇ ಬಂದಿದ್ದಾರೆ ಎಂದು ಸಂತೋಷದಲ್ಲಿ ಮುಳುಗಿದ ವೀಚಿಯವರು ತಮ್ಮ ಮಾತುಕತೆಗಳಲ್ಲಿ ಕೇಳಿದ ಕೆಲವು ಪ್ರಶ್ನೆಗಳು ಇಲ್ಲಿ ಉಲ್ಲೇಖನಾರ್ಹ, ವೀಚಿಯವರು ಕೇಳಿದ ಪ್ರಶ್ನೆ.

* "ನೀವು ಸಮುದಾಯದ ಕಾರ್ಯದರ್ಶಿಗಳಾಗಿದ್ದಿರಿ. ಎಂಟು ವರ್ಷ ಅದರಲ್ಲಿ ದುಡಿದು ಸಾಂಸ್ಕೃತಿಕ ಜಾಥಾ, ಮೂಡನಂಬಿಕೆಗಳ ವಿರುದ್ಧ ಕಾರ್ಯಕ್ರಮ, ವೈಜ್ಞಾನಿಕ ಸಂಗತಿಗಳ ಪ್ರಚಾರ, ನಾಟಕ ಕಲೆಗಳ ಬಗ್ಗೆ ಪ್ರದರ್ಶನ ನಾಡಿನ ತುಂಬ ನಡೆಸಿ ಬಹಳ ಉಪಯುಕ್ತ ಕೆಲಸ ಮಾಡಿದ್ದೀರಿ. ಅದನ್ನು ಬಿಟ್ಟಿದ್ದೇಕೆ, ಹೇಳುವಿರಾ"?

"ಓ ಅದೆಲ್ಲ.... ಹೆಂಡತಿಗೂ ಗೊತ್ತಾಗದಂತೆ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೆ. ಆಗ ಇದ್ದ ಒಂದೇ ಮಗುವಿಗೆ ಹೋಗಿ ಬರೋ ಜೀವವಾಗಿ ನರ್ಸಿಂಗ್ ಹೋಂ ಸೇರಿಸಿದ್ದೆ ಜೇಬು ಖಾಲಿ. ಸಂಸ್ಥೆ ಹೇಳಿತು ಯಾವ ಫಲಾಪೇಕ್ಷೆಯೂ ಇಲ್ಲದೆ ದುಡಿಯಬೇಕು ಕಷ್ಟ ಕಾಲದಲ್ಲಿ ಮಾನವೀಯ ಸ್ಪಂದನವೂ ಇಲ್ಲದೆ ಹೋದರೆ ಬದುಕುವುದೆಂತು? ಹೀಗಾಗಿ ಹೊರಬಂದೆ. ಆದರೆ ಸಮುದಾಯ, ಜಾಥಾ ಕಾರ್ಯಕ್ರಮ, ದಲಿತ ಸಂಘರ್ಷ ಸಮಿತಿಯ ಜೊತೆಗಿನ ಒಡನಾಟ ಇವೆಲ್ಲ ಸೇರಿ ಎಷ್ಟು ಕೋಟಿ ಕೊಟ್ಟರೂ ದೊರಕದ ಅನುಭವ ಶ್ರೀಮಂತಿಕೆಯನ್ನು ನನ್ನಲ್ಲಿ ತುಂಬಿದವು. ಅದಕ್ಕಾಗಿ ಈ ಸಂಘಟನೆಗಳನ್ನು ನಾನೆಂದಿಗೂ ಮರೆಯುವಂತಿಲ್ಲ".

* "ಒಡಲಾಳವನ್ನು ಏತಕ್ಕಾಗಿ ನೀವು ರಂಗದ ಮೇಲೆ ತಂದಿರಿ"?

ಅದು ನನ್ನ ಮನೆತನದ ಕತೆಯೇ ಆಗಿ ನನಗೆ ಕಂಡಿತು. ಅನ್ಯರ ಕತೆಯಾಗಿ ತೋರಲೇ ಇಲ. ಸಾಕವ್ವ ಬಂದು ನನ್ನ ಕಣ್ಣರೆಪ್ಪೆಗಳ ಮೇಲೆ ಕೂತು ಸವಾರಿ ಮಾಡತೊಡಗಿದ್ದರ ಪರಿಣಾಮವಾಗಿ ಅದಕ್ಕೆ ನಾನೇ ಸಂಭಾಷಣೆ ಬರೆದು ನಟರನ್ನು ಕಲೆಹಾಕಿ ಸ್ಟೇಜ್ ಮೇಲೆ ತಂದೆ. ದೇವಾನುದೇವತೆಗಳ ಹರಕೆಯ ಗಂಟು, ಹಾಲು ಮೊಸರಿನ ಮಡಕೆಯನ್ನು ಹೊತ್ತ ನೆಲುವು ಪುಟ್ಟಗೌರಿಯ ಗೋಡೆಯ ಮೇಲೆ ಬಿಡಿಸಿದ ನವಿಲಿನ ಚಿತ್ರ, ಬಡವರ ಬದುಕು ಮತ್ತು ಕಲಾವಂತಿಕೆಯ ಸಂಕೇತಗಳಾಗಿ ಕಾಡಿದವು. ನಾಟಕ ಯಶಸ್ವಿಯಾಯಿತು".

ಮಹಾಚೈತ್ರ ಸ್ಟೇಜ್ ಮಾಡಿಸಿದ್ದೂ ಇಂಥದೇ ಕಾರಣಕ್ಕಾಗಿ. ಬಸವಣ್ಣನವರನ್ನು ಸ್ಟೇಜ್ ಮೇಲೆ ತರದೆ ಅವರ ಅನುಯಾಯಿಗಳಾಗಿದ್ದ ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ ಹಡಪದ ಅಪ್ಪಣ್ಣಗಳೇ ಮುಖಂಡತ್ವ ವಹಿಸುವ ಹನ್ನೆರಡನೇ ಶತಮಾನದ ಕತೆಯನ್ನು ಇಂದಿಗೂ ಪ್ರಸ್ತುತವಾಗುವಂತೆ ಬರೆದ ನಾಟಕವೊಂದು ನನಗೆ ಬೇಕಾಗಿತ್ತು. ಶಿವಪ್ರಕಾಶ್ ಈ ಬಯಕೆ ಈಡೇರಿಸಿದರು. ನಾನೇ ಮಹಾಚೈತ್ರ ಹೆಸರಿಡಲು ಸೂಚಿಸಿದ. ಕಡೆಗೆ ಅವರು ಒಪ್ಪಿದರು. ನಾಟಕ ಯಶಸ್ವಿಯಾಯಿತು. ದುಡಿಯುವ ವರ್ಗದ ಪರವಾದ ನಾಟಕ ಇದು. ಶ್ರಮಜೀವಿಗಳೇ ಆ ನಾಟಕದ ನಾಯಕರು. ಕಾಲಜ್ಞಾನಿ ಕನಕನೇ ಆಗಲಿ ಸುಲ್ತಾನ್ ಟಿಪ್ಪುವೇ ಆಗಲಿ ಇವರೆಲ್ಲ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದಿಂದ ಬಂದ ಮಹಾನ್ ನಾಯಕರು. ಸಾವಿರ ವರ್ಷ ಕಳೆದರೂ ಅವರು ಹೀರೋಗಳಾಗಿಯೇ ಜನಜೀವನದ ನಡುವೆ ಉಳಿಯುತ್ತಾರೆ. ಅದಕ್ಕಾಗಿ ಆ ನಾಟಕಗಳನ್ನು ನಿರ್ದೇಶಿಸಿದೆ.

ವೀಚಿಯವರು ತುಂಬ ಅಗತ್ಯವಾದ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರಗಳನ್ನು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ, ಸಿಜಿಕೆ ತಾವು ಆಯ್ದುಕೊಂಡ ನಾಟಕದ ಹಿಂದಿನ ತಾತ್ವಿಕತೆಯನ್ನು ಅತ್ಯಂತ ಸರಳವಾಗಿ ಮತ್ತು ನಿಖರವಾಗಿ ಹೇಳಿದ್ದಾರೆ. ಈ ಸೈದ್ಧಾಂತಿಕತೆಯನ್ನು ತಿಳಿಯಲು ಯಾವುದೇ ವಾದ ಬೇಕಾಗಿಲ್ಲ. ಆದ್ದರಿಂದಲೇ ಅವರ ತಾತ್ವಿಕತೆಯ ಹಿಂದೆ ಮಾನವೀಯತೆಯೇ ಪ್ರಮುಖ ಪಾತ್ರ ವಹಿಸುತ್ತದೆ, ಕಮ್ಯುನಿಸ್ಟ್ ಪಕ್ಷದ ಸದಸ್ಯನಿರಲಿ, ಸ್ವತಂತ್ರ ನಿರ್ದೇಶಕನಾಗಿರಲಿ ಅವರ ನಂಬಿಕೆಗಳು ಉದಾರ ಮಾನವತಾವಾದದಿಂದ ರೂಪುಗೊಂಡ ಸತ್ಯಗಳೇ ಆಗಿರುವುದರಿಂದ ಅದು ನಾಟಕ ನಿರ್ದೇಶನದ ಹಿಂದೆ ಸದಾ ಕೆಲಸ ಮಾಡುತ್ತದೆ.



**೪. ಸಂಘಟಕರಾಗಿ**

ಸಂಘಟನಕಾರನಾಗಿ ಸಿಜಿಕೆಯನ್ನು ಡಾ. ವಿಜಯಾ ಅವರು ತಮ್ಮದೇ ದೃಷ್ಟಿಯಲ್ಲಿ ವಿಶ್ಲೇಷಿಸಿದ್ದಾರೆ.

"ಸಿಜಿಕೆ ಅವರದು ಒಂದು ವಿಚಿತ್ರ ಎನ್ನಬಹುದಾದಂತ ಅವಸ್ಥಾಂತರಗಳ ರಂಗಜೀವನ. ರಾಜಕೀಯವಾಗಿ ಅವರ ಆರಂಭದ ನಿಲುವು ಬೇರೆಯದೇ ಆಗಿತ್ತು. ಅನಂತರ ಅವರು ನಂಬಿದ, ಬದ್ಧರಾದ ಮತ್ತೊಂದು ರಾಜಕೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ತತ್ಕಾಲೀನ ಸಂದರ್ಭಕ್ಕೆ ಅವರು ಸ್ಪಂದಿಸಿದ ಬಗೆ, ಜೀವದ ಹಂಗು ತೊರೆದು ಜನಸಾಮಾನ್ಯರಲ್ಲಿ ಅರಿವು-ಎಚ್ಚರ ಮೂಡಿಸಲು ಪಟ್ಟ ಶ್ರಮ ಅನನ್ಯವೆನಿಸುವಂಥದ್ದು. ಇಲ್ಲೆಲ್ಲ ತಾನು ಒಪ್ಪಿದ-ನಂಬಿದ ತತ್ವಕ್ಕಾಗಿ ಕೊಟ್ಟುಕೊಳ್ಳುವ ಗುಣವೊಂದೇ ಪ್ರಧಾನವಾಗಿತ್ತು. ಸಿಜಿಕೆಯ ಸಮುದಾಯ, ರಂಗಸಂಪದ, ರಂಗನಿರಂತರ ಇಂಥ ಅನೇಕ ಕಾರ್ಯಚಟುವಟಿಕೆಗಳ ಹಿಂದೆ ನಾನು ಗಮನಿಸಿದ್ದು ಈ ಜೀವ ಹೊಸ ರಂಗಚಟುವಟಿಕೆ ಎಂದಾಗ ಮೈಮುರಿದು ದುಡಿಯುತ್ತದೆ. ಪಕ್ಷ, ತಂಡ ಇತ್ಯಾದಿಗಳ ಒಲವಿಗಿಂತ ಕೆಲಸವೇ ಈತನಿಗೆ ಮುಖ್ಯ ಎಂಬುದನ್ನು. ಇವೆಲ್ಲವನ್ನು ಮೀರಿದ ಇನ್ನೊಂದು ಅಪರೂಪದ ಗುಣವೆಂದರೆ ಎಲ್ಲ ಸಂಘಟನೆಗಳಲ್ಲಿ ದೌರ್ಬಲ್ಯ ಇದೆ ಅನಿಸಿದರೂ ಅಲ್ಲಿ ಹಾಜರಾಗಿ ದಂಡು ಕಟ್ಟಿ ಸಂಘಶಕ್ತಿಯ ಅಗತ್ಯವನ್ನು ಗೊತ್ತುಪಡಿಸುವುದು. ಈ ದೃಷ್ಟಿಯಿಂದ ಕಲಾಕ್ಷೇತ್ರದ ಸಿಬ್ಬಂದಿಯ ಹಿತರಕ್ಷಣೆ, ಖಾಯಂ ನೌಕರಿ, ಅಗತ್ಯ ಸವಲತ್ತು ಗಳಿಗಾಗಿ ಸಿಜಿಕೆ ಒಡ್ಡಿಕೊಂಡದ್ದು ಸಣ್ಣ ಪ್ರಮಾಣದ ಮಾತಲ್ಲ. ಅಸಂಘಟಿಕರು ಸಂಘಟಿತರಾದಾಗ ಅಲ್ಲೂ ಅಜ್ಞಾನದಿಂದಾಗಿ ಏರ್ಪಡುವ ಅನೇಕ ಮುಜುಗರಗಳನ್ನು ಸಿಜಿಕೆ ಅವು ಬಂದ ಹಾಗೆ ನುಂಗಿಗರಳ ಕಂಠನಂತೆ ವರ್ತಿಸಿದ್ದನ್ನು ಪ್ರತ್ಯಕ್ಷ ಕಂಡಿದ್ದೇನೆ. ಪರಿಣಾಮಗಳು ಒಮ್ಮೊಮ್ಮೆ ಬೂಮ್‌ರಾಂಗ್ ಆಗಬಹುದು. ಆದರೆ ಫಲ ಒಂದಿಲ್ಲೊಂದು ದಿನ ದಕ್ಕುವುದಂತೂ ನಿಜ. ಅದು ಸಂಘಟನೆಯಿಂದ ಎಂಬ ತೀರ್ಮಾನ ಎಂದೂ ಹುಸಿ ಹೋಗಲಿಲ್ಲ....

– ತಲೆ ತುಂಬಾ ಸಾಲದ ಹೊರೆ, ಕಾಲೇಜಿಗೂ ಚಕ್ಕರ್ ಹಾಕಿ ಸಂಬಳಗಳೂ ಇಲ್ಲದೆ ಹೊರೆಯಷ್ಟು ಮೆಮೋಗಳನ್ನು ಹೊತ್ತು, ಮನೆವಾರ್ತೆ ನೋಡದೆ ಅಲೆಯುವ ಯಜಮಾನನೆಂದು ವ್ಯಥೆಗೊಳ್ಳುವ ಮನೆಯವರನ್ನು ಎದುರಿಸಲಾಗದೆ ಕಲಾಕ್ಷೇತ್ರದ ಮೆಟ್ಟಿಲ ಮೇಲೆ ಮತ್ತೆ ಗುಂಪು ಕಟ್ಟಿ ಕೂರುವ ಸಿಜಿಕೆ ಮತ್ತೆ ಚುರುಕಾಗುವುದು ಈ ಹರಟೆಯಲ್ಲಿ ಹೊರಡುವ ಹೊಸ ಯೋಜನೆಗಳಿಂದ ಮಾತ್ರ".

ಇಷ್ಟೆಲ್ಲಾ ಕೆಲಸಗಳನ್ನು ಮಾಡುತ್ತಾ ಸಂಘಟಕರಾಗಿ ಉಳಿದು ಬಿಡಬೇಕಿದ್ದ ಸಿಜಿಕೆ ನಿರ್ದೇಶಕರಾದದ್ದೇ ಒಂದು ಸಾಧನೆಯೆಂದೇ ಹೇಳಬಹುದು. ಬೀದಿನಾಟಕಗಳು ಕನ್ನಡ ರಂಗಭೂಮಿಯಲ್ಲಿನ್ನೂ ಪ್ರಚಾರಕ್ಕೆ ಬರದೇ ಇದ್ದಾಗ ಸಿಜಿಕೆ ಅದನ್ನು ಪ್ರಾರಂಭಿಸಿದರು. ಕೊಳೆಗೇರಿಗೂ ನಾಟಕಗಳಿಗೂ ಸಂಬಂಧವಿಲ್ಲ ಎಂದು ತಿಳಿದಿದ್ದ ಕಾಲದಲ್ಲಿ ಕೊಳೆಗೇರಿಗಳಲ್ಲಿ ನಾಟಕ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದರು. ದಲಿತರ ಮೇಲಿನ ದೌರ್ಜನ್ಯದಂತಹ ಸಾಮಾನ್ಯ ಘಟನೆಗಳು ನಾಟಕಕ್ಕೆ ವಸ್ತು ಹೇಗೆ ಆಗಬಲ್ಲುದು ಎಂಬ ಆಲೋಚನೆಯಿದ್ದಾಗ ಬೆಲ್ಚಿಯಲ್ಲಿ ದಲಿತರನ್ನು ಸುಟ್ಟ ಪ್ರಸಂಗವನ್ನೇ ನಾಟಕವನ್ನಾಗಿ ಮಾಡಿದರು. 'ಅಲ್ಲೇ ಇದ್ದೋರು' ನಾಟಕ ಕೂಡ ಬೀದಿನಾಟಕಗಳಲ್ಲಿ ಒಂದು ಮೈಲಿಗಲ್ಲು. ಬೆಲ್ಚಿ, ಅಲ್ಲೇ ಇದ್ದೋರು ನಾಟಕಗಳು ಹೆಚ್ಚು ಚರ್ಚೆಗೊಳಗಾಗಲಿಲ್ಲ. ವಿಮರ್ಶಕರ ಗಮನಕ್ಕೆ ಬರಲಿಲ್ಲವೆಂಬ ಅಂಶವನ್ನು ವಿಜಯಾ ಅವರೂ ಗುರುತಿಸಿದ್ದಾರೆ.

"ಸಿಜಿಕೆ ಬರೆದು ಆಡಿಸಿದ 'ಅಲ್ಲೇ ಇದ್ದೋರು' ನನ್ನನ್ನು ಇವತ್ತೂ ಕಾಡುತ್ತಿದೆ. ನಾನು ತುಂಬ ಮೆಚ್ಚಿಕೊಂಡ ನಾಟಕ ಮತ್ತು ಪ್ರಯೋಗವಿದು. ಇಂಥ ನಾಟಕಗಳು ಹೆಚ್ಚು ಚರ್ಚೆಗೆ ಒಳಗಾಗುವುದಿಲ್ಲ. ನಮ್ಮ ವಿಮರ್ಶಾ ವಿಭಾಗಕ್ಕೆ ಕೆಲವರು ಬರೆದ ನಾಟಕಗಳು ಮಾತ್ರ ಮುಖ್ಯವಾಗುತ್ತವೆ. ಅರ್ಥಗಳು ಸಿಗುತ್ತವೆ. ಸಿಜಿಕೆ ಅಂಥವರಿಗೆ ಇವರು ನಿರೀಕ್ಷಿಸುವ ಆ ಅಕಾಡೆಮಿಕ್ ಶಿಸ್ತು ಇದ್ದಂತಿಲ್ಲ. ಅಕಾಡೆಮಿಕ್ ವಲಯದಲ್ಲೇ ಇರುವ ಈ ಅರ್ಥಶಾಸ್ತ್ರಜ್ಞನಿಗೆ ಕಲೆಯ ಕ್ಷೇತ್ರದಲ್ಲಿ ಆ ಅಕಾಡೆಮಿಕ್ ಶಿಸ್ತು ಇಲ್ಲ. ಅರ್ಥಶಾಸ್ತ್ರದ ಟೀಕೆಯ ಅಗತ್ಯವೂ ಕಾಣಲಿಲ್ಲ ಎಂಬುದು ಆಶ್ಚರ್ಯದ ಸಂಗತಿ".

ಸಿಜಿಕೆ ಅವರನ್ನು ಪ್ರತಿಷ್ಠಿತ ವಿಮರ್ಶಾಕ್ಷೇತ್ರ ಅನೇಕ ವರ್ಷ ಕಡೆಗಾಣಿಸಿದ್ದನ್ನು ಮಾರ್ಮಿಕವಾಗಿ ವಿಜಯಾ ಅವರು ದಾಖಲಿಸಿದ್ದಾರೆ. ಇಂದು ಕನ್ನಡ ರಂಗಭೂಮಿಯಲ್ಲಿ ಪ್ರತಿಭಾವಂತ ಅನೇಕರು ಅವಜ್ಞೆಗೆ ಒಳಗಾದದ್ದು ಕಂಡುಬರುತ್ತದೆ. ಅವರಲ್ಲಿ ಸಿಜಿಕೆ ಕೂಡ ಒಬ್ಬರಾಗಿದ್ದರು. ಸಿಜಿಕೆ ಇಟ್ಟ ಹೆಜ್ಜೆಗಳು ಸಲೀಸು ದಾರಿಯಲ್ಲೇನು ಇರಲಿಲ್ಲ. ಕಲ್ಲುಮುಳ್ಳುಗಳ ಹಾದಿಯ ನಡಿಗೆಯೆಂಬುದು ಇದರಿಂದ ತಿಳಿಯುತ್ತದೆ. ಸಿಜಿಕೆ ಏನಾಗಬೇಕೋ ಅದು ಆಗಿಲ್ಲ. ಅವರು ಕೊಂಚ ಪೋಜು ಕೊಟ್ಟು ನಿಲ್ಲಲಿಲ್ಲ ಹೇಗ್ಗಳಿಕೆಗಳಿಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿ ಇಂಪ್ರೆಸ್ ಮಾಡಲಿಲ್ಲ. ನನ್ನ ಜನರು ಸ್ಲಮ್‌ನಲ್ಲಿದ್ದಾರೆ. ಹಳ್ಳಿಗಳಲ್ಲಿದ್ದಾರೆ. ಕಲಾಕ್ಷೇತ್ರದ ಕಟ್ಟೆಗಳ ಮೇಲಿದ್ದಾರೆ ಎಂದು ಭಾವಿಸಿದ್ದರಿಂದ ನಿರೀಕ್ಷಿಸಿದ ಮಟ್ಟಕೆ ಏರಲಿಲ್ಲವೆಂಬ ಕೊರಗು ಅವರ ಸ್ನೇಹಿತರಲ್ಲಿದೆ. ಅವರನ್ನು ಹತ್ತಿರದಿಂದ ಬಲ್ಲವರಲ್ಲಿದೆ.

ಸಂಘಟನಾಕಾರರಾಗಿ ಸಿಜಿಕೆಯನ್ನು ಹತ್ತಿರದಿಂದ ಬಲ್ಲ ನಾಟಕಕಾರ ಲಿಂಗದೇವರು ಹಳೇಮನೆ ಗುರುತಿಸಿರುವುದು ಹೀಗಿದೆ :

"ಸಿಜಿಕೆಯ ಬಗ್ಗೆ ನನಗಿರುವ ವಿಸ್ಮಯ ಮತ್ತು ವಿನಮ್ರ ಗೌರವವೆಂದರೆ, ತನ್ನ ನಾಟಕ ಚಟುವಟಿಕೆಗೆ ಆತ ಹಣ ಕೂಡಿ ಹಾಕುವ ರೀತಿ. ಸಂಘಟನೆಯ ಸಮರ್ಥ ಅಂಶ ಇಂದೂ ಆತನಲ್ಲಿ ಮನೆ ಮಾಡಿಕೊಂಡಿದೆ. ಇಂದು ಒಂದೊಂದು ನಾಟಕವನ್ನೂ ಪ್ರದರ್ಶನಕ್ಕೆ ಸಿದ್ಧಪಡಿಸುವಾಗ ಸಾವಿರಾರು ರೂಪಾಯಿಗಳ ಲೆಕ್ಕಚಾರ ಹಾಕಬೇಕಾದ ಪರಿಸ್ಥಿತಿ ಇದೆ. ಅದರಲ್ಲೂ ತನ್ನ ನಾಟಕದ ಪ್ರದರ್ಶನದ ಯಾವುದೇ ವಿಭಾಗದಲ್ಲೂ ಕಾಂಪ್ರಮೈಸ್ ಮಾಡಲು ಒಪ್ಪದ ಒಬ್ಬ ನಿರ್ದೇಶಕನ ಒಟ್ಟಾರೆ ಮೊತ್ತ ಯಾವತ್ತೂ ಅಧಿಕವಾಗಿಯೇ ಇರುತ್ತದೆ. ಸಿಜಿಕೆ ಸಹ ಇದಕ್ಕೆ ಅಪವಾದವಲ್ಲ. ಆದರೆ ಆತನಿಗಿರುವ ನಾಟಕದ ಕಮಿಟ್‌ಮೆಂಟ್ ತನ್ನ ಇನ್ನಿತರ ಕಮಿಟ್‌ಮೆಂಟ್‌ಗಳ ಕಾಂಪ್ರಮೈಸ್‌ಗೆ ಅನುವು ಮಾಡಿಕೊಡುತ್ತದೆ. ಇಂದು ಸಿಜಿಕೆ ಆದರ್ಶದ ಮಾತಾಡುತ್ತಿಲ್ಲ. ಪ್ರಾಯೋಗಿಕತೆಯ ಬಗ್ಗೆ ಮಾತನಾಡುತ್ತಿದ್ದಾನೆ. ಕನಸುಗಳಿವೆ ಆದರೆ ಭ್ರಮೆಗಳಿಲ್ಲ. ರಂಗಭೂಮಿಯ ಉಳಿವಿಗಾಗಿ, ತನ್ನ ದರ್ಶನದ ರಂಗ ಪ್ರದರ್ಶನಕ್ಕಾಗಿ ಹಣದ ಮುಗ್ಗಟ್ಟನ್ನೂ ಲೆಕ್ಕಿಸದೆ ಮುನ್ನುಗ್ಗುವ ಛಾತಿ ಬಹುಶಃ ಇಂದು ಉಳಿದಿರುವುದು ಸಿಜಿಕೆ ಒಬ್ಬನಲ್ಲಿಯೇ ಎಂದು ನನಗನ್ನಿಸುತ್ತದೆ"[1]

ಇದೇ ರೀತಿಯ ಅಭಿಪ್ರಾಯವನ್ನು ಲೇಖಕರಾದ ಎಸ್.ಎಸ್. ಹಿರೇಮಠ್ ತಿಳಿಸಿದ್ದಾರೆ.

“ಒಳ್ಳೆ ಸಂಘಟಕನಲ್ಲಿರಬೇಕಾದ ಸಹನೆ, ಧೈರ್ಯ, ಮುನ್ನುಗ್ಗುವ ಸ್ವಭಾವ ಚುರುಕುತನ, ಬುದ್ಧಿವಂತಿಕೆ, ನಯತಂತ್ರಗಾರಿಕೆ, ಸತತಾಭ್ಯಾಸ, ಸತತ ಪ್ರಯತ್ನ ಮುಂತಾದೆಲ್ಲ ಗುಣ ಸಿಜಿಕೆಯವರಲ್ಲಿ ನನಗೆ ಕಂಡುಬರುತ್ತದೆ. ಅವರ ಜತೆ ಹಲವಾರು ಸಲ ಭೆಟ್ಟಿಯಾದ ಸಂದರ್ಭವಿದ್ದರೂ ನಮ್ಮ ನಮ್ಮ ವೈಯುಕ್ತಿಕ ಬದುಕಿನ ವಿವರಗಳನ್ನು ಕೇಳು-ಹೇಳುವಲ್ಲಿ ಯಾವುದೋ ಮುಜುಗರ ನನ್ನಲ್ಲಿ ಬೆಳೆದು ಬಂದಿದೆ.” ಹೀಗೆ ನಿರ್ದೇಶಕರಾಗುವ ಮೊದಲು ಸಿಜಿಕೆ ಸಂಘಟಕರು. ಲೋಕದ ನೋವುಗಳೆಲ್ಲ ನನ್ನ ಹೃದಯ ಮೇಲೆ ಇವೆಯೆಂದು ಭಾವಿಸುವವರು ಕಡಿಮೆ. ನಮ್ಮ ಹೆಸರಾಂತ ಲೇಖಕ, ಕಲಾವಿದರು, ನಿರ್ದೇಶಕರೆಲ್ಲರು ಸಂಘಟನೆ ಮಾಡಿ ಸಕ್ರಿಯರಾಗಿರುವ ಉದಾಹರಣೆಗಳು ಕೆಲವೇ ಇರಬಹುದು. ಸಿಜಿಕೆ ಇದಕ್ಕೊಂದು ಅಪವಾದ. ಇಂದಿಗೂ ಅವರ ಮೊದಲ ಆದ್ಯತೆ ಸಂಘಟನೆ. ಆ ಮೂಲಕ ನಾಟಕ, ವಿಚಾರ ಸಂಕಿರಣ, ಕಮ್ಮಟಗಳು ನಡೆಯುತ್ತವೆ. ಸಿಜಿಕೆ ವ್ಯಕ್ತಿಯಾಗಿ ನಿರ್ದೇಶಕ, ನಾಟಕಕಾರ ಮಾತ್ರವಲ್ಲ, ಸಂಘಟನಾ ಶಕ್ತಿಯಾಗಿ ಕೂಡ ರಂಗಭೂಮಿಯಲ್ಲಿ ಮುಖ್ಯರಾಗಿದ್ದಾರೆ.

ಸಿಜಿಕೆಯವರು ಬೀದಿ ನಾಟಕಗಳನ್ನು ಪ್ರಾರಂಭಿಸಿದ ಮೊದಲಿಗರು. ಸಮರ್ಥರು ಎಂದು ಹಿರಿಯ ನಾಟಕ ವಿಮರ್ಶಕರಾದ ಕ.ವೆಂ. ರಾಜಗೋಪಾಲ್ ಅಭಿಪ್ರಾಯ ಪಡುತ್ತಾರೆ.

“ಈ ಬೀದಿನಾಟಕ ಪ್ರಕಾರವು ತಾತ್ಕಾಲಿಕವಾಗಿ ಅತ್ಯವಶ್ಯವಾದ ರಾಜಕೀಯ ಎನ್ನುವುದಕ್ಕಿಂತ ಸಾಮಾಜಿಕವಾದ ಒತ್ತಡದಿಂದ ಬೇರಾಯಿತು. ಇದರ ರುಚಿಯನ್ನು ಬಾದಲ್ ಸರ್ಕಾರ್ ಇಲ್ಲಿಗೆ ಬಂದು ಸಮುದಾಯದ ತರಬೇತಿ ಶಿಬಿರವನ್ನು ನಡೆಸಿದುದರಿಂದ ಇದರ ಪ್ರಯೋಗಕ್ಕೆ ಹೆಚ್ಚು ಲಾಭವೂ ಆಯಿತೆನ್ನಬಹುದು. ಇದರ ಫಲವನ್ನು ಮುಖ್ಯವಾಗಿ ಬೆಲ್ಚಿಯಲ್ಲಿ ಕಾಣುತ್ತೇವೆ. ಇದು ಇಡೀ ಭಾರತದ ಪ್ರಜೆಗಳ ಪ್ರಜ್ಞೆಯನ್ನು ಎಚ್ಚರಿಸಲು ಉಪಯುಕ್ತವಾದ ಒಂದು ಘಟನೆಯೆಂಬುದನ್ನು ಪತ್ರಿಕೆಗಳು ಸಾರಿದ್ದವು. ತರುಣರು ಇಂತಹುದಕ್ಕಾಗಿ ಕಣ್ಣು ತೆರೆದಿದ್ದರು ಮತ್ತು ಇದರ ಫಲವಾಗಿ ರವೀಂದ್ರ ಕಲಾಕ್ಷೇತ್ರವನ್ನು ದಾಟಿ ನಾಟಕದ ಪ್ರಯೋಜನವನ್ನು ವೃತ್ತ ಪತ್ರಿಕೆಯಂತೆ ನೀಡಬಲ್ಲ ಸಾಧನವಾಗಿ ಬೀದಿ ನಾಟಕವು ಬಳಕೆಗೆ ಬಂದಿತು. ಬೆಲ್ಚಿಯ ಘಟನೆಯ ಒಂದು ಅದ್ಭುತ ರೂಪಕವಾಗಿ ಪ್ರಯೋಜನಕಾರಿಯಾದುದು ಈ ಕ್ಷಣಗಳಲ್ಲಿ, ಬೆಂಗಳೂರಿನ ಸ್ಲಮ್ ಒಂದರಲ್ಲಿ ಇದರ ನಿರ್ದೇಶಕ ಮತ್ತು ರಚನಾಕಾರ ಇಬ್ಬರೂ ಒಬ್ಬರೇ ಆದ ತರುಣ ಸಿ.ಜಿ. ಕೃಷ್ಣಸ್ವಾಮಿ. ಇಂದಿಗಂತೂ ಅದ್ವಿತೀಯ ತರುಣ ನಿಸ್ಸೀಮ-ಎಂದು ಹೇಳಬಹುದು.”[2] ಹೀಗೆ ಬೀದಿ ನಾಟಕಗಳ ಮೂಲಕ ನಮ್ಮ ರಂಗಭೂಮಿಗೆ ಹೊಸ ತಿರುವು ನೀಡಿದ ಸಿಜಿಕೆ ಮುಂದೆ ವಿಶೇಷ ನಿರ್ದೇಶನ ಸಾಮರ್ಥ್ಯ ಬೆಳೆಸಿಕೊಂಡದ್ದು ವಿಸ್ಮಯಕಾರಕವಾಗಿದೆ. ಎಷ್ಟರಮಟ್ಟಿಗೆ ಎಂದರೆ ಪ್ರತಿಯೊಂದು ನಾಟಕಗಳು, ಹಲವಾರು ಹೊಸ ಚಿಂತನೆಗೆ ತೆರೆದುಕೊಂಡವು. ಈ ವಿಮರ್ಶೆಯಿಂದ ಸಿಜಿಕೆಗೆ ಪ್ರಯೋಜನವಾಯಿತೋ ಇಲ್ಲವೋ ತಿಳಿಯದು. ಆದರೆ ರಂಗಭೂಮಿಯ ವಿವಿಧ ಸಾಧ್ಯತೆಗಳನ್ನು ಚರ್ಚಿಸುವಂತಾಯಿತು. ಕನ್ನಡ ರಂಗಭೂಮಿ ಇದರಿಂದ ಬೆಳವಣಿಗೆ ಕಾಣುವುದು ಸಾಧ್ಯವಾಯಿತು. ೧೯೯೦ರಲ್ಲಿ ‘ಗ್ರಾಮ ಸಮಾಜ’ ಎಂಬ ಹೊಸ ರೀತಿಯ ಕಾರ್ಯಕ್ರಮ ಸಿಜಿಕೆಯವರ ರಂಗನಿರಂತರದ ಮೂಲಕ ಸಿಜಿಕೆಯವರು ಮಾಡಿದ ಹೊಚ್ಚ ಹೊಸ ಪ್ರಯತ್ನ ಇದಾಗಿತ್ತು. ಸ್ವಾತಂತ್ರ್ಯಾನಂತರದ ಭಾರತದ ಚಿತ್ರವನ್ನು ಸೆರೆಹಿಡಿದವರು ಗ್ರಾಮೀಣ ಭಾರತವನ್ನೇ ಬಹುವಾಗಿ ಚಿತ್ರಿಸಿದ್ದಾರೆ. ಕನ್ನಡದ ಒಂಭತ್ತು ಮಂದಿ ಖ್ಯಾತ ಕಥೆಗಾರರ ಸಣ್ಣಕತೆಗಳ ರೂಪಾಂತರ ಮಾಡಿ ನಾಟಕಗಳ ಪ್ರದರ್ಶನ ಮಾಡಿದ ಕೀರ್ತಿ ಈ ಉತ್ಸವಕ್ಕೆ ಸಲ್ಲುತ್ತದೆ. ಇದರ ಕನಸುಗಾರರಾಗಿದ್ದ ಸಿಜಿಕೆಯವರು ಈ ಕಾರ್ಯಕ್ರಮದಿಂದ ರಂಗಭೂಮಿಗೆ ದೊರಕಿದ ಪ್ರಯೋಜನವನ್ನು ಗುರುತಿಸುವುದು ಹೀಗೆ; ಈವರೆಗೆ ರಂಗಭೂಮಿಯಲ್ಲಿ ರಂಗಸಜ್ಜಿಕೆ, ಬೆಳಕು, ಉಡುಗೆ-ತೊಡಿಗೆ ಮುಂತಾದ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದವರು ನಿರ್ದೇಶಕರಾಗುವ ಮೊದಲ ಹೆಜ್ಜೆಗಳನ್ನಿಟ್ಟರು. ಯುವರಂಗತಜ್ಞರು ಕೊಟ್ಟ ಕೊಡುಗೆಯಿಂದ ಇಲ್ಲಿನ ಪ್ರಯೋಗಗಳು ಯಶಸ್ವಿಯಾಗಿವೆ. ಗ್ರಾಮೀಣ ಭಾರತವನ್ನು ತನ್ನ ಹೂರಣದೊಂದಿಗೆ ಹೆಣೆದಿದ್ದ ಕಥೆಗಳನ್ನು ಆರಿಸಿ ನಾಟಕವನ್ನಾಗಿಸಿ ಬೆಂಗಳೂರಿನಲ್ಲಿ ಪ್ರದರ್ಶನ ನಡೆಸಲಾಯಿತು. ಕೇಶವರೆಡ್ಡಿ ಹಂದ್ರಾಳ ಅವರ ‘ದಮನ’ ಕಥೆಯನ್ನು ಸಿಜಿಕೆ ರೂಪಾಂತರ ಮಾಡಿ ಆ.ನ. ರಮೇಶ್ ನಿರ್ದೇಶಿಸಿದರು. ಮಂಗಳೂರಿನ ವಿದ್ಯಾರ್ಥಿ ಮಹಾಲಿಂಗ ಅವರು ಬರೆದ

‘ಕೊಂಬಿನವರು’ ನಾಟಕವನ್ನು ಡಾ.ನಾ. ದಾಮೋದರ ಶೆಟ್ಟಿ ನಿರ್ದೇಶಿಸಿ ಪ್ರದರ್ಶಿಸಿದರು. ಮೂರನೆಯ ನಾಟಕ, ನಾಗತಿಹಳ್ಳಿ ಚಂದ್ರಶೇಖರ್ ಅವರ ‘ಪುಟ್ಟಕ್ಕನ ಮೆಡಿಕಲ್ ಕಾಲೇಜ್’ ಕತೆಯನ್ನು ಮೈನಾ ಚಂದ್ರಶೇಖರ್ ರಂಗರೂಪಕ್ಕೆ ತಂದು ಮಲ್ಲಿಕಾರ್ಜುನ್ ನಿರ್ದೇಶನ ಮಾಡಿದರು. ನಾಲ್ಕನೆಯ ನಾಟಕ ರಾಮಚಂದ್ರಶರ್ಮರ ‘ಸಂಗಮ’ ಕಥೆಯನ್ನು ಕಾಶಿ ಮತ್ತು ಪಾಲ್ ಸುದರ್ಶನ್ ರೂಪಾಂತರಿಸಿ ರಮೇಶ್ ಪಂಡಿತ್ ಅವರ ನಿರ್ದೇಶನಕ್ಕೆ ದಾರಿಯಾಯಿತು. ಐದನೆಯ ನಾಟಕ ಬಿ.ಸಿ. ದೇಸಾಯಿ ಅವರ ಕತೆ ‘ಸುರಂಗ’ವನ್ನು ಮೀನಾಕ್ಷಿಯವರು ರೂಪಾಂತರಿಸಿ ಸುದರ್ಶನ್ ರಂಗದ ಮೇಲೆ ತಂದರು. ಆರನೆಯ ನಾಟಕ ಶಾಂತರಸರ ‘ಬೇಸ್ತು’ ಕತೆಯನ್ನು ಶಿವಲಿಂಗೇಗೌಡರ ಜೊತೆಯಲ್ಲಿ ರೂಪಾಂತರಿಸಿದ ಮೈನಾ ಚಂದ್ರಶೇಖರ್ ತಾವೇ ರಂಗದ ಮೇಲೆ ತಂದರು. ದೇವನೂರ ಮಹಾದೇವ ಅವರ ‘ಡಾಂಬರು ಬಂದುದು’ ಕತೆಯನ್ನು ಕತ್ತು ಸತ್ಯ ಅವರೇ ರೂಪಾಂತರಿಸಿ ನಿರ್ದೇಶನ ಮಾಡಿ ಯಶಸ್ವಿ ಪ್ರಯೋಗವನ್ನಾಗಿಸಿದರು. ಡಾ. ಬೆಸಗರಹಳ್ಳಿ ರಾಮಣ್ಣನವರ ‘ಕಪ್ಪೆ ಬಾವಿ ನಕ್ಷತ್ರ’ವೆಂಬ ಹೆಸರಿನಲ್ಲಿ ಅವರ ‘ಗಾಂಧಿಸಂತಾನ’ ಕತೆಯನ್ನು ಚಂದ್ರು ರೂಪಾಂತರಿಸಿ ಶ್ರೀಕಂಠಯ್ಯ ನಿರ್ದೇಶಿಸಿದರು. ಡಾ. ಯು.ಆರ್. ಅನಂತಮೂರ್ತಿಯವರ ‘ಮೌನಿ’ ಕತೆಯನ್ನು ಉಮಾಶಂಕರ್ ಮತ್ತು ಬಿ.ವಿ. ರಾಜರಾಂ ರೂಪಾಂತರಿಸಿದರೆ, ನಾಗರಾಜಮೂರ್ತಿ ನಿರ್ದೇಶನ ಮಾಡಿದರು. ಕೊನೆಯದಾಗಿ ಕುಂ. ವೀರಭದ್ರಪ್ಪನವರ ‘ದೇವರ ಹೆಣ’ ಕತೆಯನ್ನು ನಟರಾಜ್ ರೂಪಾಂತರಿಸಿ ಶಿವರುದ್ರಯ್ಯ ನಿರ್ದೇಶನ ಮಾಡಿ ಉತ್ತಮ ಪ್ರಯೋಗವೆನಿಸುವಂತೆ ಮಾಡಿದರು. ಒಟ್ಟಾರೆ ‘ಗ್ರಾಮ ಸಮಾಜ’ವೆಂಬ ಕಾರ್ಯಕ್ರಮದ ಕಲ್ಪನೆಯ ಹಿಂದೆ ಹೊಸ ಚಿಂತನೆಯಿದೆ. ರಂಗಭೂಮಿಗೆ ಚಲನೆ ಕೊಡುವ ಪ್ರಾಮಾಣಿಕ ಪ್ರಯತ್ನವಿದೆ. ಯುವಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದಾತ್ತ ಮನಸ್ಸಿದೆ. ಇಷ್ಟೊಂದು ದೀರ್ಘ, ಸಾರ್ಥಕ ಕಲ್ಪನೆಯ, ಕೆಲಸದ ಹಿಂದೆ ಇದ್ದವರು ಸಿಜಿಕೆ. ಆದ್ದರಿಂದಲೇ ಸಿಜಿಕೆಯವರು ಕನ್ನಡ ರಂಗಭೂಮಿಗೆ ಸಲ್ಲಿಸಿದ ಕೊಡುಗೆ ಅನನ್ಯವಾದದ್ದಾಗಿದೆ.

‘ರಂಗ ನಿರಂತರ’ ಹಮ್ಮಿಕೊಂಡ ೧೫೦ ದಿನಗಳ ರಂಗಪ್ರದರ್ಶನವು ರಂಗಭೂಮಿಯಲ್ಲೇ ವಿಶಿಷ್ಟ ಪ್ರಯೋಗ ಮತ್ತು ಸಾಧನೆಯೆಂದು ಹೆಸರಾಗಿದೆ. ಬೆಂಗಳೂರಿನ ರಂಗ ಚಟುವಟಿಕೆಗಳು ಸ್ಥಗಿತವಾಗಿವೆಯೆಂದು ಅನ್ನಿಸಿದಾಗ, ನಾಟಕಗಳ ಪ್ರೊಡಕ್ಷನ್ ಖರ್ಚು ಮಿತಿಮೀರಿದೆ ಎನ್ನಿಸಿದಾಗ, ಹೆಸರಾಂತ ತಂಡಗಳು ಹಳೆಯ ನಾಟಕಗಳನ್ನೇ ಆಡಿ ಬಳಲಿದಾಗ, ಹೊಸ ತಂಡಗಳು, ನಿರ್ದೇಶಕರು ಹುಟ್ಟದೇ ಹೋದಾಗ ಈ ಪ್ರಯತ್ನ ಸಾರ್ಥಕವೆನ್ನಿಸಿತು. ಸಿಜಿಕೆ ಯವರು ತಮ್ಮ ಸಮಕಾಲೀನ ನಿರ್ದೇಶಕರನ್ನು, ನಟರನ್ನು ಕೂಡಿಸಿಕೊಂಡು ವಿಭಿನ್ನ ನಾಟಕಗಳನ್ನು ಪ್ರದರ್ಶಿಸಿದರೆ, ನಿಂತಂತಿರುವ ರಂಗಕ್ರಿಯೆಯು ಹರಿಯುವ ನೀರಿನಂತಾಗಲೆಂದು ಆಶಿಸಿ ನಡೆಸಿದ ಈ ಕಾರ್ಯಕ್ರಮವು ಶ್ರಮದಾಯಕವಾದುದಾಗಿತ್ತು. ಒಂದು ಇಂಟಿಮೇಟ್ ಥಿಯೇಟರ್‌ನ ಹೊಸ ಕಲ್ಪನೆಯನ್ನು ಸೃಷ್ಟಿಸಿ ಪ್ರೇಕ್ಷಕ ಸಮುದಾಯವು ಬೇಸರಗೊಳ್ಳದೆ ಭಾಗವಹಿಸುವಂತಹ ಪ್ರಯೋಗಗಳನ್ನು ಮಾಡಿದ್ದು ಹೆಚ್ಚುಗಾರಿಕೆಯೆಂದೇ ಹೇಳಬೇಕು. ಬಿ. ಜಯಶ್ರೀ, ಟಿ.ಎನ್. ಸೀತಾರಾಂ, ನಾಗಾಭರಣ, ಟಿ.ಎನ್. ನರಸಿಂಹನ್ ಮುಂತಾದ ಖ್ಯಾತ ನಿರ್ದೇಶಕರನ್ನು ಕೂಡಿಸಿ ಅವರ ಜೊತೆಗೆ ಹೊಸಬರನ್ನು ಸೇರಿಸಿ ನಿರ್ವಹಿಸಿದ ಸಿಜಿಕೆಯವರ ರಂಗಚಳುವಳಿಯ ಕಮಿಟ್‌ಮೆಂಟ್‌ನ್ನು ಅನೇಕರು ಹಾಡಿ ಹೊಗಳಿದ್ದಾರೆ. ಸಂಘಟನಾಚಾತುರ್ಯಾ ಮತ್ತು ರಂಗಾಸಕ್ತಿಗೆ ಮತ್ತೊಂದು ಹೆಸರಾಗಿ ಈ ಸಂದರ್ಭಗಳಲ್ಲಿ ಸಿಜಿಕೆ ದುಡಿದಿರುವುದನ್ನು ರಂಗಭೂಮಿ ಇಂದಿಗೂ ಮೆಲುಕು ಹಾಕುತ್ತಿದೆ. ಇಂತಹ ಪ್ರಯತ್ನಗಳು ನಡೆಯದೇ ಹೋಗಿದ್ದರೆ ಹವ್ಯಾಸಿ ರಂಗಭೂಮಿ ತನ್ನ ಪ್ರೇಕ್ಷಕರನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಹೊಸ ಪ್ರೇಕ್ಷಕರನ್ನು ತಯಾರು ಮಾಡುವ ತುರ್ತಿನ ಸಂದರ್ಭ ಅದಾಗಿತ್ತು. ಐತಿಹಾಸಿಕವಾಗಿಯೂ ಸಿಜಿಕೆಯವರು ಮತ್ತು ಸಂಗಡಿಗರು ಮಾಡಿದ ಈ ಪ್ರಯತ್ನಗಳು, ಕನ್ನಡ ರಂಗಭೂಮಿಯ ಮುಖ್ಯವಾದ ಘಟ್ಟವಾಗಿದೆ. ‘ರಂಗನಿರಂತರ’ ಎಂಬ ಹೆಸರಿನ ಅನ್ವರ್ಥವಾಗಿಯೇ ಇಂತಹ ಅನೇಕ ಚಟುವಟಿಕೆಗಳು ಸಿಜಿಕೆಯನ್ನು ಕೇಂದ್ರವಾಗಿಟ್ಟು ನಡೆದುಕೊಂಡು ಬಂದಿವೆ.

**೫. ಅನ್ವೇಷಕ – ನಿರ್ದೇಶಕ**

ಸಿಜಿಕೆಯವರ ನಿರ್ದೇಶನದಲ್ಲಿ, ನಾಟಕವನ್ನು ಅರ್ಥೈಸುವಲ್ಲಿ ವೈರುಧ್ಯಗಳಿರುತ್ತವೆ. ಈ ವೈಪರೀತ್ಯಗಳನ್ನು ಗುರುತಿಸಿರುವ ವಿಮರ್ಶಕರು ವಿರಳ. ಅವರಲ್ಲಿ ಎಸ್.ಆರ್. ರಮೇಶ್ ಮುಖ್ಯರಾಗಿದ್ದಾರೆ. ಸಿಜಿಕೆಯವರ ನಾಟಕಗಳ ನಿರ್ದೇಶನದ ಹಿಂದಿನ ಸತ್ಯಗಳನ್ನು,

ಸ್ಫೂರ್ತಿಗಳನ್ನು, ಕಾಳಜಿಗಳನ್ನು, ಅಂತಃಕರಣಗಳನ್ನು ರಮೇಶ್ ತಿಳಿದವರಾಗಿದ್ದಾರೆ. ಅವರು ಸಿಜಿಕೆಯವರನ್ನು ಅವರ ಸಮಕಾಲೀನ ನಿರ್ದೇಶಕರ ಜೊತೆಗೆ ಹೋಲಿಸಿ ಕೆಲವು ನಿದರ್ಶನಗಳನ್ನು ಓದುಗರ ಮುಂದಿಟ್ಟಿದ್ದಾರೆ.

"ಸಿಜಿಕೆ ನಾಟಕದಲ್ಲಿ ವೈರುಧ್ಯ ಚಿಂತನೆಯನ್ನು ಬಿಂಬಿಸುವ ಈ ವೈಭವೀಕರಣ ಪದೇ ಪದೇ ಕಾಣುವುದು ಕುತೂಹಲಕರ ಸಂಗತಿ. ಪಠ್ಯದ ಒಳನೋಟಗಳು ದೃಶ್ಯ ಬಾಹುಳ್ಯದಲ್ಲಿ ಪರಿವರ್ತನೆಗೊಳ್ಳುವ ರೀತಿ ವಿಚಿತ್ರ ರೀತಿಯದು. ಮದರ್ ಕರೇಜ್ ನಾಟಕವನ್ನು ನಿರ್ದೇಶಿಸಲು ಬಂದ ಸಿಜಿಕೆಯೊಂದಿಗೆ ನಾವು ಪದೇ ಪದೇ ಚರ್ಚಿಸಿದ್ದು ವೈಚಿತ್ರ್ಯಗಳ ಬಗ್ಗೆ, ಲಿಂಗದೇವರು ಹಳೇಮನೆ ಅನುವಾದಿಸಿದ ಬ್ರೆಕ್ಟ್‌ನ 'ಮದರ್ ಕರೇಜ್' ಸಿಜಿಕೆ ಯುರೋಪಿಯನ್ ಸಮುದಾಯದ ಯುದ್ಧದ ಭೀಕರತೆಯ ಬಗ್ಗೆಯಾಗಲಿ ಆರ್ಥಿಕ ಮಾದರಿಗಳ ಬಗ್ಗೆಯಾಗಲಿ ತಲೆಕೆಡಿಸಿಕೊಳ್ಳಲಿಲ್ಲ. ಮುವತ್ತು ವರ್ಷ ಯುದ್ಧ ನಡೆದದ್ದು ೧೬೧೮ ರಿಂದ ೧೬೪೮ರವರೆಗೆ. ಈ ಯುದ್ಧ ಕ್ರೈಸ್ತ ಸಮುದಾಯದ ಯುರೋಪನ್ನು ಪ್ರೊಟೆಸ್ಟಂಟ್ ಮತ್ತು ಕ್ಯಾಥೋಲಿಕ್ ರಾಜ್ಯಗಳಾಗಿ ಒಡೆದು ಹಾಕಿತು. ಬ್ರೆಕ್ಟ್ ಮತನಿಷ್ಠೆಯನ್ನು ತನ್ನ ನಾಟಕದಲ್ಲಿ ನೆಪಮಾತ್ರಕ್ಕೆ ಬಳಸಿಕೊಳ್ಳುತ್ತಾನೆ. ಆದರೆ ಅವನು ನಿಜವಾಗಿಯೂ ಹೇಳಬೇಕೆಂದಿರುವುದು ಯುದ್ಧವನ್ನು ಹುಟ್ಟು ಹಾಕುವವನ ಉದ್ದೇಶ ಲಾಭಗಳಿಸುವುದೆಂಬುದನ್ನು, ಸಮುದಾಯ ಪ್ರಯೋಗಕ್ಕೆ ನಾಟಕವನ್ನು ಸಿದ್ಧಪಡಿಸುವಾಗ ಈ ಚಿಂತನೆಗಳನ್ನೆಲ್ಲಾ ಬದಿಗಿಟ್ಟು ಕೇವಲ ತಾಯಿ, ತನ್ನ ಸಂಸಾರ ನಿರ್ವಹಣೆಯಲ್ಲಿ ಹೆಣಗಾಡುವ ಪರಿಪರಿಯನ್ನು ಭಾವನಾತ್ಮಕವಾಗಿ ಹಿಡಿದಿಡುವುದು ಮುಖ್ಯವಾಯಿತು. ಸಿಜಿಕೆ ಮದರ್ ಕರೇಜ್‌ಳನ್ನು ಅರ್ಥಮಾಡಿಕೊಂಡದ್ದು ಒಡಲಾಳದ ಸಾಕವ್ವನ ಮೂಲಕ.

ಕ್ಯಾಪ್ಟನ್ ಲಾರಾಳ ಸಂಘರ್ಷಾತ್ಮಕ ಸಂಬಂಧದ ಎಳೆಗಳು, ಊರುಕೇರಿಯ ಸಮುದಾಯದ ಜಗಳಗಳಾಗಿ ಹೇಗೆ ಸ್ಥಿತ್ಯಂತರಗೊಳ್ಳುತ್ತವೆಯೋ ಹಾಗೆ ಅನ್ನ ಫರ್‌ಲಿನ್, ಸ್ವಿಸ್‌ಚೀಸ್, ಎಲಿಫ್ ಇವರ ಸಂಬಂಧಗಳು ಸಾಕವ್ವ, ಶಿವು, ಮಂಜು ಮುಂತಾದವರ ಕೌಟುಂಬಿಕ ಭಾವಸ್ತರದಲ್ಲಿ ವ್ಯಕ್ತಗೊಳ್ಳುತ್ತವೆ. ತನ್ನ ಬೇರುಗಳ ಬಗ್ಗೆ ಅತ್ಯಂತ ಕಾಳಜಿ ವಹಿಸುವ ಸಿಜಿಕೆ ಯಾವುದೇ ನಾಟಕದ ಪಾತ್ರ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಬಳಸಿಕೊಳ್ಳುವ ದೃಷ್ಟಿಕೋನ ತನ್ನ ಬದುಕಿನದಾಗಿರುತ್ತದೆ, ಓಥೆಲೋ, ಯಯಾತಿ ಅಥವಾ ಮಹಾಚೈತ್ರ, ಒಡಲಾಳ ಈ ನಾಟಕಗಳು ಪ್ರದರ್ಶಿಸಿದ ಭಾವಸ್ಥಿತಿ ಸಿಜಿಕೆ ಕಂಡ ಅವರದೆ ಆಪ್ಯಾಯಮಾನವಾದ ಭಾವಸ್ಥಿತಿಯಾಗಿರುತ್ತದೆ.[3]

"ಮದರ್ ಕರೇಜ್‌ನಲ್ಲಿ ಸ್ವಿಸ್‌ಚೀಸ್‌ನ ಹೆಣವನ್ನು ಮದರ್ ಕರೇಜ್‌ಳ ಮುಂದೆಯೇ ಕರೆದೊಯ್ಯುತ್ತಾರೆ. ಆಕೆ ತನ್ನ ಮಗನನ್ನು ನೋಡಿದರೂ ಗುರುತಿಸುವುದಿಲ್ಲ. ಭಯದಿಂದಾಗಿ, ತನ್ನ ಶೋಕವನ್ನು ವ್ಯಕ್ತಪಡಿಸಲಾಗದೆ ಸುಮ್ಮನಿರಬೇಕಾಗುತ್ತದೆ. ಇಲ್ಲಿ ಮದರ್ ಕರೇಜ್ ಅಮಾನವೀಯವಾಗಬೇಕಾಗುತ್ತದೆ. ಕಾರಣ ತನ್ನ ಮತ್ತು ಕ್ಯಾಥರೀನ್‌ಳ ಅಸ್ತಿತ್ವದ ಸಮಸ್ಯೆ ಮುಖ್ಯವಾಗಿರುತ್ತದೆ. ಸಿಜಿಕೆ ಈ ದೃಶ್ಯವನ್ನು ಅತ್ಯಂತ ರೊಮ್ಯಾಂಟಿಕ್ ಆಗಿ ನೋಡುತ್ತಾರೆ. ಸ್ವಿಸ್‌ಚೀಸ್‌ನ ಹೆಣವನ್ನು ಹೊತ್ತುಕೊಂಡು ಹೋಗುವುದು, ಆ ಹೆಣದ ಹಿಂದೆ ತಾಯಿ ಭೋರಿಡುವುದು, ಮೂಕ ಸಾಕ್ಷಿಯಂತೆ ನಿಂತಿರುವ ಪಾದ್ರಿ ಕೈಯಲ್ಲಿದ್ದ ಮೇಣದ ಬತ್ತಿಯನ್ನು ನಂದಿಸುವುದು, ಹಿನ್ನೆಲೆಯಲ್ಲಿ ಸಂಗೀತದ ಗತಿತಾರಕ ಸ್ಥಿತಿಯನ್ನು ತಲುಪುವುದು ಹೀಗೆ. ಇದೇ ದೃಶ್ಯ ಸೆಂಟಿಮೆಂಟಲ್ ಆಗುತ್ತಾ ಭಾವ ಸಮಾಧಿಯನ್ನು ಸೃಷ್ಟಿಸುತ್ತದೆ. ಪ್ರದರ್ಶನಕ್ಕೆ ಮುನ್ನ ನನಗೆ ಈ ದೃಶ್ಯದ ನಿರೂಪಣೆಯ ಬಗ್ಗೆ ಸಂಶಯವಿತ್ತು. ಆದರೆ, ಪ್ರದರ್ಶನದ ನಂತರ, ಪ್ರೇಕ್ಷಕರು ಆಸಕ್ತಿಯಿಂದ ಈ ದೃಶ್ಯ ವಿವರಣೆಯಲ್ಲಿ ಪಾಲ್ಗೊಂಡಿದ್ದನ್ನು ಕಂಡು, ಸಿಜಿಕೆಯ ಈ ವಿಸ್ತರಣೆಯ ಬಗ್ಗೆ ಆಸಕ್ತಿ ಮೂಡತೊಡಗಿತ್ತು".

ಸಿಜಿಕೆ ನಮಗೆ ಮುಖ್ಯವಾಗುವುದು ಈ ವೈಪರೀತ್ಯಗಳಲ್ಲಿ. ಇಂಗ್ಲೀಷ್ ನಾಟಕಗಳ ಸನ್ನಿವೇಶವನ್ನು ಕನ್ನಡದ ಸಂದರ್ಭಕ್ಕೆ ತಂದು ಸಾಕವ್ವನ ಮೂಲಕ, ಸಂಸನ ಕಣ್ಣಿನಲ್ಲಿ, ಕನಕನ ಅಧ್ಯಾತ್ಮದ ಮೂಲಕ ಲೋಕ ನೋಡುವ ದೃಷ್ಟಿ ಇದರಲ್ಲಿ ಮುಖ್ಯವಾಗುತ್ತದೆ. ಈ ವೈಪರೀತ್ಯಗಳ ಮೂಲಕ ಪಾತ್ರಗಳನ್ನು ನೋಡುವ, ಅರ್ಥಮಾಡಿಕೊಳ್ಳುವ ಸಿಜಿಕೆ ಬಳಸುವ ರಂಗಪರಿಕರಗಳು ಅತ್ಯಂತ ಶ್ರೀಮಂತವಾಗಿರುತ್ತವೆ ಎಂಬ ಟೀಕೆಗಳೂ ಇವೆ. ಇದಕ್ಕೆ ಕಾರಣಗಳಿವೆ. ರಂಗಪ್ರಯತ್ನಗಳು ಬೇಕಾಬಿಟ್ಟಿಯಾಗಿರಬಾರದು; ಬರಡಾಗಿ ಪ್ರೇಕ್ಷಕನ ಮುಂದೆ ಪ್ರದರ್ಶನಗೊಳ್ಳಬಾರದು; ಕಲೆಗೆ ಯಾವುದೇ ರಿಯಾಯಿತಿ/ಮೀಸಲಾತಿ ಇರಬಾರದೆಂಬ ಸಿಜಿಕೆಯವರ ಕಲ್ಪನೆಗಳೇ

ಇದಕ್ಕೆ ಮುಖ್ಯ ಕಾರಣಗಳಾಗಿವೆ. 'ಬೆಲ್ಚಿ'ಯಿಂದ ಇತ್ತೀಚಿನ 'ದಂಡೆ'ಯವರೆಗೆ ಅದ್ದೂರಿ ಪ್ರಯೋಗಗಳಿಗೆ ಹೆಸರಾಗಿರುವ ಸಿಜಿಕೆ ವೈಪರೀತ್ಯಗಳಲ್ಲಿ ಅವರ ಒಳಗೊಳ್ಳುವಿಕೆ ಇದೆಯೆಂಬುದನ್ನು ಸಾಬೀತು ಮಾಡಿದ್ದಾರೆ. ರಮೇಶ್ ಅವರ ವಿಶ್ಲೇಷಣೆ ಸತ್ಯಕ್ಕೆ ಹತ್ತಿರವಾದದ್ದು ಎನಿಸುತ್ತದೆ. ಅಷ್ಟೇ ಅಲ್ಲ ದೇಶೀ ಚಿಂತನೆಯ ಹರಿಕಾರನೊಬ್ಬ ಪ್ರಪಂಚದ ಯಾವುದೇ ಪರಿಸರವನ್ನು ತನ್ನ ದೇಶೀ ಮೂಲಕ್ಕೆ ಹೊಂದಿಸಿಕೊಳ್ಳುವುದೇ ಅವನ ವೈಶಿಷ್ಟ್ಯವಾಗುತ್ತದೆ. ಭಾರತೀಯ ಪ್ರೇಕ್ಷಕರನ್ನು ಮುಟ್ಟುವ ಪ್ರಾಮಾಣಿಕ ದಾರಿಯಾಗಿರುತ್ತದೆ.

ಒಡಲಾಳದಿಂದ ಖ್ಯಾತಿಗಳಿಸಿದ ಸಿಜಿಕೆಯವರು ಪ್ರಖ್ಯಾತ ನಾಟಕಕಾರರನ್ನೇ ಹುಡುಕಿಕೊಂಡು ಹೋಗಲಿಲ್ಲ. ಇದಕ್ಕೆ ವಿರುದ್ಧವಾಗಿ ನಾಟಕಕಾರರನ್ನು ಸೃಷ್ಟಿಸುವ ಕಡೆಗೆ ಹೆಚ್ಚು ಗಮನಹರಿಸಿದರು. ಇತ್ತೀಚಿನ ದಿನಗಳವರೆಗೆ ಅಂದರೆ ೧೯೯೭-೯೭ರವರೆಗೆ ನಾಟಕ ಬರೆಯಬಲ್ಲ ಶಕ್ತಿಯಿದೆಯೆಂದು ಅನ್ನಿಸಿದ ಲೇಖಕ ಮಿತ್ರರನ್ನು ಕರೆಸಿ, ಅವರೊಂದಿಗೆ ಚರ್ಚಿಸಿ ನಾಟಕಗಳನ್ನು ಬರೆಯಲು ಪ್ರೇರೇಪಿಸಿದ್ದರು. ಕವಿ ಕೆ.ಎಂ. ಮುನಿಕೃಷ್ಣಪ್ಪನವರಿಂದ 'ದೇಶಪ್ರೇಮಿ ಸುರಪುರನಾಯಕ' ನಾಟಕವನ್ನು ಬರೆಸಿ ಅದ್ದೂರಿ ಪ್ರಯೋಗವಾಗುವಂತೆ ಮಾಡಿದರು. ತಮ್ಮ ತಂತ್ರ ಸಮೃದ್ಧಿಯನ್ನು ಇಡೀ ನಾಟಕಕ್ಕೆ ಧಾರೆಯೆರೆದು ಗಮನಾರ್ಹ ಪ್ರಯೋಗವಾಗುವಂತೆ ಮಾಡಿದ್ದಲ್ಲದೆ, ಹೊಸ ನಟರನ್ನು ಹುಡುಕಿ ತರಬೇತಿ ನೀಡಿ ರಂಗದ ಮೇಲೆ ತಂದದ್ದು ಕೂಡ ಪ್ರಶಂಸೆಗೆ ಪಾತ್ರವಾಗಿದೆ. ಕಥೆಗಾರ ಮಹಾಬಲಮೂರ್ತಿ ಕೂಡ್ಲೆಕೆರೆಯವರ 'ವೈಶಂಪಾಯನತೀರ' ಕಥೆಯನ್ನು ಎಲ್.ಎನ್. ಮುಕುಂದರಾಜ್ ಅವರಿಂದ ನಾಟಕ ರೂಪಕ್ಕೆ ರೂಪಾಂತರಿಸಿ ಬೆಂಗಳೂರಿನ ಬ್ಯಾಂಕ್ ಉದ್ಯೋಗಿಗಳ 'ಹಂದರ' ತಂಡಕ್ಕೆ ನಿರ್ದೇಶನ ಮಾಡಿದರು. ಯಕ್ಷಗಾನ ಮತ್ತು ಸಾಮಾಜಿಕ ನಾಟಕ ಮಾದರಿಗಳ ಮಿಶ್ರಣವಾಗಿ ಮೂಡಿ ಬಂದ 'ವೈಶಂಪಾಯನ ತೀರ' ನಾಟಕ ಕೂಡ ಹಲವಾರು ಪ್ರದರ್ಶನಗಳನ್ನು ಕಂಡಿದೆ. ಕರ್ನಾಟಕದ ಹೊರಗೆ ಕೂಡ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಸಿಜಿಕೆಯವರ ಇಂತಹ ಪ್ರಯತ್ನಗಳು ಮುಂದುವರಿಯುತ್ತಲೇ ಇವೆ. ಹೊಸ ನಾಟಕಕಾರರ, ವಸ್ತುಗಳ ಅನ್ವೇಷಣೆ ನಿರಂತರವಾಗಿದೆ. ಸಿಜಿಕೆ ಜೀವಂತ ನಿರ್ದೇಶಕರಾಗಿರುವುದು ಈ ರೀತಿಯ ಗುಣಗಳಿಂದ. ರಂಗಭೂಮಿಯ ಜೊತೆ ಅವಿನಾಭಾವ ಸಂಬಂಧವಿಟ್ಟು ಕೊಂಡಿರುವುದರಿಂದಲೇ ಹೊಸ ಪೀಳಿಗೆಗೆ ಮಾರ್ಗದರ್ಶನ ಮಾಡುವ ಶಕ್ತಿ ಪಡೆದ ನಾಟಕಕಾರ ನಿರ್ದೇಶಕರಾಗಿದ್ದಾರೆ. ಸ್ವಭಾವತಃ ಸಿಜಿಕೆ ಖಂಡಿತವಾದಿ, ಸ್ನೇಹಿತರನ್ನು ವಾದ-ಸಿದ್ಧಾಂತಗಳಿಂದ ದೂರವಿಟ್ಟು ಅಪ್ಪಿಕೊಳ್ಳುವ ಸ್ವಭಾವ. ಅವರ ನಿಷ್ಠುರತೆಯಿಂದ ಅನೇಕರನ್ನು ಶತ್ರುಗಳನ್ನಾಗಿಸಿಕೊಂಡಿದ್ದಾರೆ: ಅರ್ಹ ಅವಕಾಶಗಳಿಂದ ವಂಚಿತರಾಗಿದ್ದಾರೆ. ಆದರೂ ಅವರನ್ನು ಅನೇಕ ಪ್ರಶಸ್ತಿ ಪುರಸ್ಕಾರಗಳು ಹುಡುಕಿಕೊಂಡು ಬಂದಿವೆ. ೧೯೯೫-೯೬ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೯೦ನೇ ಸಾಲಿನ ಕರ್ನಾಟಕ ನಾಟಕ ಆಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾದ ಗೌರವ ಸಂದಿದೆ. ಕರ್ನಾಟಕ ಸರ್ಕಾರ ಸ್ಥಾಪಿಸಿದ ಮೊಟ್ಟಮೊದಲ ದಾದಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಮತ್ತು ಕೆ.ವಿ. ಶಂಕರೇಗೌಡ ಪ್ರಶಸ್ತಿಗಳು ಕೂಡ ಇವರದಾಗಿದೆ. ೧೯೮೮ರಲ್ಲಿ ರಶಿಯಾದ ಲೆನಿನ್ ಗ್ರಾಡ್‌ನಲ್ಲಿ ನಡೆದ ಸ್ಟಾನಿಸ್ಲೋವಸ್ಕಿ ಕುರಿತ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತವನ್ನು ಪ್ರತಿನಿಧಿಸಿದ ಗೌರವಕ್ಕೆ ಪಾತ್ರರಾಗಿದ್ದಾರೆ. ದೃಶ್ಯ ಮಾಧ್ಯಮದ ಬಗೆಗೆ ಅಷ್ಟೇನು ಆಸಕ್ತಿ ತೋರದ ಸಿಜಿಕೆ ಚಲನಚಿತ್ರಗಳಿಗೆ ಸಂಭಾಷಣೆ ಬರೆದಿದ್ದಾರೆ. ಆಲನಹಳ್ಳಿಕೃಷ್ಣ ಅವರ ಪ್ರಸಿದ್ಧ ಕಾದಂಬರಿ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯನ್ನು ಆಧರಿಸಿದ ಅದೇ ಹೆಸರಿನ ಚಲನಚಿತ್ರಕ್ಕೆ ಸಂಭಾಷಣೆ ಬರೆದದ್ದಲ್ಲದೆ ಸಹ ನಿರ್ದೇಶಕರಾಗಿಯೂ ದುಡಿದಿದ್ದಾರೆ. 'ವೀರಪ್ಪನ್' ಕನ್ನಡ ಚಲನಚಿತ್ರದ ಸಂಭಾಷಣೆಕಾರರಾಗಿ ಕೆಲಸ ಮಾಡಿದ್ದಾರೆ. ಈ ಎರಡೂ ಚಿತ್ರಗಳು ಪ್ರಶಸ್ತಿ ಪಡೆದಿವೆ. ಬೆಂಗಳೂರು ಸುಚಿತ್ರ ಫಿಲಂ ಸೊಸೈಟಿಯ ಪೀರ್ ರಂಗಮಂದಿರದ ವಿನ್ಯಾಸ ರೂಪಿಸಿದ್ದಾರೆ. ಮಂಡ್ಯದ ಕೆ.ವಿ. ಶಂಕರೇಗೌಡ ಸಭಾಂಗಣದ ವಿನ್ಯಾಸಕಾರರಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡದ ಬೆಳಕು ವಿನ್ಯಾಸ ಹಾಗೂ ಸಭಾಂಗಣಕ್ಕೆ ಬೆಳಕು ಮತ್ತು ಧ್ವನಿ ವ್ಯವಸ್ಥೆ ವಿನ್ಯಾಸಗೊಳಿಸುವ ಮೂಲಕ ಬಹುಮುಖ ಪ್ರತಿಭೆಯನ್ನು ತೋರಿದ್ದಾರೆ.

ಈ ಲೇಖನ ಮುಗಿಸಬೇಕು ಎನ್ನುವಷ್ಟರಲ್ಲೇ ಸಿಜಿಕೆ ಸಾಧನೆ ಕೂಡ ಮುಗಿಯುತ್ತಲೇ ಇಲ್ಲ. ಹೀಗಾಗಿ ಲೇಖನ ಕೊನೆ ಮಾಡಲೇಬೇಕೆಂದು ಕೂತಾಗ ಮತ್ತೊಂದು ಸಾಧನೆ ಕಣ್ಣ ಮುಂದೆ ಬಂದು ಬಿದ್ದಿತು. 'ಶಿವಸಂಚಾರ' ಎಂಬ ರೆಪರ್ಟರಿಯನ್ನು ಸಾಣೇಹಳ್ಳಿ ಎಂಬ ಕುಗ್ರಾಮದಲ್ಲಿ ಸ್ಥಾಪಿಸಿ, ದೇಶದ ರೆಪರ್ಟರಿಗಳಲ್ಲಿ ಗಮನ ಸೆಳೆಯುತ್ತಿದೆ. ಇಂದಿಗೂ ಕರ್ನಾಟಕದ ಪ್ರಬುದ್ಧ ಪ್ರೇಕ್ಷಕರನ್ನು ಸಾಣೇಹಳ್ಳಿಯಲ್ಲಿ

ನೋಡಬಹುದು. ಒಂದು ಧಾರ್ಮಿಕ ಮಠ ಸಾಹಿತ್ಯ ಸಂಸ್ಕೃತಿಗೆ ಹೇಗೆ ಮುಂದಾಗಬಹುದೆಂಬುದಕ್ಕೆ ಸ್ಪಷ್ಟ ನಿದರ್ಶನ ರೂಪಿಸಿದ್ದಾರೆ. ರಂಗ ನಿರ್ದೇಶಕ ಸಿಜಿಕೆ ಈ ಶಿವಸಂಚಾರದ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಅದರ ಯಶಸ್ಸಿಗೆ ಮೂಲ ಕಾರಣ ತರಳಬಾಳು ಶಾಖಾಮಠದ ಶ್ರೀ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರೆನ್ನುತ್ತಾರೆ. ರಂಗಭೂಮಿಗೆ ಸಿಜಿಕೆಯವರ ಸಾಧನೆಯನ್ನು ಸೀಮಿತಗೊಳಿಸಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಕಾರಣ ಸಿಜಿಕೆ ಆಕ್ರಮಿಸಿಕೊಂಡಿದ್ದು ಹತ್ತು ಹಲವು ಚಳುವಳಿಗಳನ್ನು, ಬಂಡಾಯ ಸಾಹಿತ್ಯ ಚಳುವಳಿಯ ಸಂಸ್ಥಾಪಕ ಕಾರ್ಯದರ್ಶಿ, ಸಮುದಾಯದ ಸಂಸ್ಥಾಪಕ ಕಾರ್ಯದರ್ಶಿ, ದಲಿತ ಸಂಘರ್ಷ ಸಮಿತಿಯ ಪ್ರಮುಖ ರೂವಾರಿ. ಪೌರ ಕಾರ್ಮಿಕರ ಹೋರಾಟದಲ್ಲಿ ಮುಂದೆ ಸಾಹಿತ್ಯ ಪತ್ರಿಕೆಗಳಾದ 'ಈ ಮಾಸ' ನಾಟಕ, 'ಅನ್ವೇಷಣೆ'ಯ ಬರಹಗಾರರು ಇತ್ಯಾದಿ. ಹೀಗೆ ಬೆಂಗಳೂರಿನ ಎಲ್ಲ ಸಾಹಿತ್ಯ ಸಂಸ್ಕೃತಿಯ ಚಳುವಳಿಗಳಲ್ಲಿ ಸಿಜಿಕೆ ಪಾತ್ರ ಇದ್ದೇ ಇರುತ್ತದೆ. ಹೀಗೆ ಸಿಜಿಕೆಯ ಬಗ್ಗೆ ಬರೆಯಲು ಹೋದಷ್ಟು ಸಿಕ್ಕುವ ಮಾಹಿತಿಯೇ ಹೆಚ್ಚು ಇದರ ಬಗ್ಗೆ ಸಿಜಿಕೆಯನ್ನು ಕೇಳಿದಾಗ ಕೊಡುವ ಉತ್ತರ ಇನ್ನೂ Interesting …

'An Individual should be defeated by his works' ಎನ್ನುತ್ತಾರೆ.

ಇದಕ್ಕೆ ಉದಾಹರಣೆ ಎನ್ನುವಂತೆ ತಾವೇ ಸಾಣೆಹಳ್ಳಿಯಲ್ಲಿ ನಿಂತು, ಬಯಲು ರಂಗ ಮಂದಿರದ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ದೇಶದ ಸುಸಜ್ಜಿತ ಬಯಲು ರಂಗ ಮಂದಿರವಿದು.

**೬. ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ**

ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಸಿಜಿಕೆ ರೂಪಿಸಿದ ಸಂಘಟನಾ ಶಕ್ತಿ ಇಂದು ಸರ್ಕಾರಿ ಸ್ವಾಯತ್ತತೆ ಸಂಸ್ಥೆಗಳಿಗೆ ಒಂದು ಮಾದರಿ ಎನ್ನಬಹುದು. ಸಿಜಿಕೆ ಅಧ್ಯಕ್ಷರಾಗಿದ್ದಾಗ ಸರ್ಕಾರ ನೀಡಿದ ಹಣ ಕೇವಲ ಆರು ಲಕ್ಷ ಮೂವತ್ತು ಸಾವಿರ. ಆದರೆ ಈ ಆರ್ಥಿಕ ಕಡಿತದಿಂದ ಸಿಜಿಕೆ ಹಿಮ್ಮೆಟ್ಟಲಿಲ್ಲ. ರಾಜ್ಯಾದ್ಯಂತ ಸಂಚರಿಸಿ ಸಂಗ್ರಹಿಸಿದ್ದು ಅಪಾರ ಸಂಪನ್ಮೂಲ. ಇವರ ಕಾಲದಲ್ಲಿ ತಂದ ಮೂವತ್ತು ವ್ಯಕ್ತಿಗಳ (ವೃತ್ತಿರಂಗ ಭೂಮಿ, ಹವ್ಯಾಸಿ ರಂಗಭೂಮಿ, ನಟರು, ಮಾಲೀಕರು, ತಂತ್ರಜ್ಞರು, ನಿರ್ದೇಶಕರು, ವಿಮರ್ಶಕರು ಇತ್ಯಾದಿ) 'ಬದುಕು-ಸಾಧನೆ' ಒಂದು ಅಪ್ರತಿಮ ಸಾಧನೆ. ಇದಕ್ಕಾಗಿ ಇವರು ಹಣ ಸಂಗ್ರಹಿಸಿದ್ದು ತನ್ನ ಅಕಾಡೆಮಿಯ ಸದಸ್ಯರಿಂದಲೇ. ಇಂದಿಗೂ ಈ ದಾಖಲೆಗಳು ಕರ್ನಾಟಕ ರಂಗಭೂಮಿಯ ವಿಶಿಷ್ಟ ದಾಖಲೆಗಳು. ಇವರು ಅಧ್ಯಕ್ಷರಾಗಿದ್ದಾಗ ಶ್ರಮಿಕ ರಂಗಕರ್ಮಿಗಳಿಗೆ ರೂಪಿಸಿದ 'ಪದ್ದಣ್ಣ' ರಂಗ ಪ್ರಶಸ್ತಿ ರಂಗ ಶ್ರಮಕ್ಕೆ ಸಿಜಿಕೆ ನೀಡಿದ ಶ್ರಮದ ಪ್ರತಿಫಲ ಎನ್ನಬಹುದು. ಹೀಗೆ ನಿರಂತರ ಸಾಹಿತ್ಯ ರಂಗಶ್ರಮ ಸಿಜಿಕೆಯನ್ನು ಈ ಲೇಖನಕ್ಕೆ ಆಧಾರವಾಗಿಸಿದೆ ಎಂದರೆ ತಪ್ಪಾಗಲಾರದು.

ಬೆಂಗಳೂರು ವಿಶ್ವವಿದ್ಯಾಲಯ ಇಷ್ಟೆಲ್ಲಾ ಸಾಹಸ ಮನೋವೃತ್ತಿ ಹೊಂದಿದ್ದ ಸಿಜಿಕೆ ಯವರನ್ನು ಗಾಂಧಿ ಭವನದ ನಿರ್ದೇಶಕರನ್ನಾಗಿ ಕೂಡ ನೇಮಿಸಿತು. ೧೯೭೨ರ ಸುಮಾರಿಗೆ ಜ್ಞಾನಭಾರತಿ ಆವರಣದಲ್ಲಿ ಗಾಂಧಿ ಭವನ ಅಸ್ತಿತ್ವಕ್ಕೆ ಬಂದಿತ್ತಾದರೂ ಕಾರ್ಯಕ್ರಮಗಳ ಕೊರತೆಯಿಂದ ಗಾಂಧಿ ಭವನ ಬೆಂಗಳೂರು ವಿಶ್ವವಿದ್ಯಾಲಯ ಅಷ್ಟೇನೂ ವ್ಯಾಪಕ ಪ್ರಚಾರಕ್ಕೆ ಬಂದಿರಲಿಲ್ಲ. ಸಿಜಿಕೆಯವರು ಇದರ ನಿರ್ದೇಶಕರಾದ ತಕ್ಷಣ ಹಮ್ಮಿಕೊಂಡಿದ್ದು ಹೊಸ ಕಾರ್ಯಯೋಜನೆಗಳನ್ನು ಗಾಂಧಿ ಭವನಕ್ಕಾಗಿ. ಈ ಯೋಜನೆಗಳನ್ನು ಕ್ರಿಯಾ ಯೋಜನೆಗಳೆಂದು ರೂಪಿಸಿ ಮಹಾತ್ಮ ಗಾಂಧೀಜಿ ಹಾಗೂ ಅವರ ತತ್ವ ಎಂದರೆ ಹಿರಿಯರಿಗೆ ಮಾತ್ರ ಸೀಮಿತವಲ್ಲ. ಅದರ ಅವಶ್ಯಕತೆ ಇಂದು ಯುವಕರಿಗೂ ಅತ್ಯಗತ್ಯ ಎಂದು ಚರ್ಚೆ ಕಮ್ಮಟಗಳನ್ನು ರೂಪಿಸತೊಡಗಿದರು. ಇದರಲ್ಲಿ ಮುಖ್ಯವಾದುದು ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರ ಜನಪರ ಕಾಳಜಿಗಳ ಬಗ್ಗೆ ನಡೆದ ಕಮ್ಮಟ. ಈ ಇಬ್ಬರ ಮಧ್ಯೆ ಅನೇಕ ತಾತ್ವಿಕ ಭಿನ್ನಾಭಿಪ್ರಾಯ ಇದ್ದಿದ್ದು ಅವರ ಮುಖಾಮುಖಿ ಸಾಧ್ಯವೇ ಇಲ್ಲ ಎಂಬ ಭಾವನೆ ನಮ್ಮಲ್ಲಿ ಅನೇಕರಲ್ಲಿತ್ತು. ಆದರೆ ಸಿಜಿಕೆಯವರು ಇವರಿಬ್ಬರ ನಡುವೆಯಿದ್ದ ಸಾಮರಸ್ಯಗಳನ್ನು ಒಂದೆಡೆ ತಂದು ಇವರಿಬ್ಬರ ಗುಣಾತ್ಮಕ ಜನಪರ ಕಾಳಜಿಗಳ ಬಗ್ಗೆ ಎಲ್ಲ ಚಿಂತಕರ ಗಮನ ಸೆಳೆದರು. ಹೀಗಾಗಿ ಅನೇಕ ವೈರುಧ್ಯಗಳ ನಡುವೆಯೂ ಸಾಮರಸ್ಯವನ್ನು ಹುಡುಕುವುದು ಸಿಜಿಕೆಯವರ ಹುಟ್ಟುಗುಣ ಎನ್ನಬಹುದು. ಇವರು ಕ್ರಿಯಾಶೀಲ ರಂಗ

ನಿರ್ದೇಶಕರ ಜೊತೆಗೆ ರೂಢಿಸಿಕೊಂಡಿದ್ದು ಸಮಾಜದ ಎಲ್ಲ ಜನಧ್ವನಿಗಳ ಜೊತೆ. ಇವರು ಬರೆದ ಆತ್ಮಕಥನ 'ಕತ್ತಾಲೆ ಬೆಳದಿಂಗಳು' ಕಳೆದ ಮೂರು ನಾಲ್ಕು ದಶಕಗಳ ಒಂದು ಸಾಂಸ್ಕೃತಿಕ ದಾಖಲೆ. ಇಲ್ಲಿ ಇವರು ತಮ್ಮ ವೈಯುಕ್ತಿಕ ಜೀವನದ ಫಲಶೃತಿಗಳ ಜೊತೆಗೆ ಇವರೆಲ್ಲ ಸಹಪಾಠಿಗಳ ಚಳುವಳಿಯ ನೇತಾರರ ವಿಶಿಷ್ಟ ಅನುಭವವನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಕೃತಿಯ ಜನಪ್ರಿಯತೆ ಎಷ್ಟಿತ್ತೆಂದರೆ ಬಿಡುಗಡೆಯಾದ ದಿನವೇ ಸುಮಾರು ೮೦% ರಷ್ಟು ಕೃತಿಗಳು ಮಾರಾಟವಾಗಿ ಒಂದೂವರೆ ಲಕ್ಷಕ್ಕೂ ಹೆಚ್ಚಿನ ಹಣ ಸಂಪಾದಿಸಿತು. ವ್ಯಕ್ತಿಯೊಬ್ಬ ಕ್ರಿಯಾಶೀಲನಾಗಿದ್ದು ಅತ್ಯಂತ ಜನಪ್ರಿಯನೂ ಆಗಬಹುದು ಎನ್ನುವುದಕ್ಕೆ ಸಿಜಿಕೆ ಸಾಕ್ಷಿ ಎನ್ನಬಹುದು. ಈ ಲೇಖನವನ್ನು ಮುಗಿಸುವಷ್ಟರಲ್ಲಿಯೇ ಇವರ ಆತ್ಮಕಥೆಗೆ ನಾಡಿನ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಗಳು ಲಭಿಸಿವೆ. ಶಿವರಾಮ ಕಾರಂತರ ಪ್ರತಿಷ್ಠಾನ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. ಐವತ್ತು ವಸಂತಗಳನ್ನು ಕಂಡಿರುವ ಸಿಜಿಕೆಯವರು ರಂಗಭೂಮಿಗೆ ಇನ್ನೂ ಮಿಗಿಲಾದ ಕಾಣಿಕೆಯನ್ನು ನೀಡಬೇಕು. ಆ ಮೂಲಕ ಅವರ ಬದುಕು ಸಾರ್ಥಕವಾಗುತ್ತದೆ.

[1]ರಂಗಭೂಮಿಯ ಅಂತರಂಗ ಸಿಜಿಕೆ ಪುಟ ೩೯, ೫೮

[2]ರಂಗಭೂಮಿಯ ಅಂತರಂಗ ಸಿಜಿಕೆ, ಪುಟ ೧೦೦

[3]ರಂಗಭೂಮಿಯ ಅಂತರಂಗ ಸಿಜಿಕೆ, ಪುಟ ೮೯

(೩)

**೮. ನಾಟಕಗಳ ವಿಮರ್ಶೆ**

**ರಂಗದ ಮೇಲೆ 'ಒಡಲಾಳ'ದ ಅಂತರಂಗ**

ಕನ್ನಡ ಕಾದಂಬರಿ ಕಥೆಗಳೆಷ್ಟೋ ರೂಪಾಂತರಗೊಂಡು ರಂಗದಲ್ಲಿ ರಾರಾಜಿಸಿ ಕೆಲವು ಮಾಯವಾಗಿದ್ದರೆ, ಮತ್ತೆ ಕೆಲವು ಗಟ್ಟಿಯಾಗಿ ಉಳಿದಿವೆ. ಇದಕ್ಕೆ ಹಲವು ಕಾರಣಗಳಿರಬಹುದು, ಸಮಕಾಲೀನತೆ, ರಾಜಕೀಯ, ಕೆಳವರ್ಗದವರ ಚಿತ್ರಣ ಹೀಗೆ ಒಂದೊಂದು ಬಾರಿ ಒಂದೊಂದು ವಸ್ತು ಕ್ಲಿಕ್ ಆಗುವುದುಂಟು.

ಎರಡು ತಿಂಗಳ ಹಿಂದೆ ಸಿ.ಜಿ. ಕೃಷ್ಣಸ್ವಾಮಿ 'ರಂಗಸಂಪದ'ಕ್ಕೆ ದೇವನೂರು ಮಹಾದೇವರ 'ಒಡಲಾಳ' ರೂಪಾಂತರಿಸಿ, ನಿರ್ದೇಶಿಸುತ್ತಿದ್ದಾರೆ ಎಂದು ತಿಳಿದಾಗಲೂ ರೂಪಾಂತರಗಳ ಸಾಲಿಗೆ ಮತ್ತೊಂದು ನಾಟಕವೆನಿಸಿತು. ಆದರೆ ಕಥೆಯನ್ನು ಕನ್ನಡ ಸಾಹಿತ್ಯದಲ್ಲಿ ಗಂಭೀರವಾಗಿ ಪರಿಗಣಿಸಿದ್ದರಿಂದ, ಪಾತ್ರಗಳನ್ನು ನಮ್ಮ ಗ್ರಾಮೀಣ ಪರಿಸರದ ಪರಸ್ಪರ ಪಾತ್ರಗಳಾಗಿದ್ದರಿಂದ ನಾಟಕ ಹೇಗೆ ಬರುತ್ತದೆ ಎಂಬ ಕುತೂಹಲವಂತೂ ಇದ್ದೇ ಇದ್ದಿತು. ಅಲ್ಲದೆ ರಂಗಭೂಮಿಯ ಉತ್ತಮ ನಟಿ ಉಮಾಶ್ರೀ ಸಾಕವ್ವನಿಗೆ ಜೀವ ತುಂಬಲಿದ್ದಾಳೆ ಎಂದು ತಿಳಿದಿದ್ದರಿಂದ ಮುದುಕಿಯಂತೆ ಹೇಗೆ ನಟಿಸುತ್ತಾಳೆ ಎಂಬ ಮತ್ತೊಂದು ಕುತೂಹಲವು ಜೊತೆಗೂಡಿತ್ತು.

ಈ ಎಲ್ಲಾ ಹಿನ್ನೆಲೆಯೊಂದಿಗೆ ನಾಟಕ ನೋಡಲು ಹೋದಾಗ ಭ್ರಮ ನಿರಸನಗೊಳಿಸದೆ ನಾಟಕ ಮೊದಲ ದೃಶ್ಯದಲ್ಲೇ ಪ್ರೇಕ್ಷಕರನ್ನು ಮೋಡಿಗೊಳಿಸಿಬಿಟ್ಟಿತು. ಬಯಲು ಸೀಮೆಯ ಹಳ್ಳಿಯೊಂದರ ದಿಟ್ಟ ಚಿತ್ರಣ, ಅವರ ಬಡತನ, ಶ್ರೀಮಂತಿಕೆಯ ಕಿರುಕುಳ ಈ ಮಧ್ಯದಲ್ಲೇ

ತನ್ನ ಅಸ್ತಿತ್ವ, ಆಸೆ, ಆಕಾಂಕ್ಷೆಗಳನ್ನು ಹುಡುಕುವ ವ್ಯಕ್ತಿಗಳ ತುಮುಲ ಒಂದೊಂದು ಹಂದರ ಸುಂದರವಾಗಿ ಬಿಚ್ಚಿಕೊಳ್ಳುತ್ತಿದ್ದರೆ ಪ್ರೇಕ್ಷಕನಿಗೆ ತನ್ನಿರುವನ್ನು ಮರೆಸುವಷ್ಟು ಸಹಜವಾಗಿ ಮೂಡಿತ್ತು ನಾಟಕದ ದೃಶ್ಯಗಳು.

ಕಥೆ ಓದುವಾಗಲೇ ಸಾಕವ್ವ ಕಣ್ಣ ಮುಂದೆ ಕಟ್ಟಿ ನಿಲ್ಲುತ್ತಾಳೆ. ಅವಳ ಎರಡೆಕೆರೆ ಜಮೀನು, ರಾಜಹುಂಜ, ಇರುವ ಮುರುಕು ಜೋಪಡಿಯಲ್ಲೇ ಪಾಲು ಕೇಳುವ ಮಗ, ಭ್ರಷ್ಟ ವ್ಯವಸ್ಥೆಗೆ ಸಿಲುಕಿ ಅಸಹಾಯಕ ಪರಿಸ್ಥಿತಿಯಲ್ಲಿ ತೊಳಲಾಡುವ ವ್ಯಕ್ತಿಗಳು ಈ ಎಲ್ಲದರ ನಡುವೆ ಹೋರಾಡುವ ಸಾಕವ್ವ ಎಲ್ಲಿಯೂ ಕಾಣುವಂತಹವಳು. ಇವುಗಳ ಮಧ್ಯೆ ಸಾಕವ್ವನ ಹುಂಜ ಮೋಜಿನ ಪಾರ್ಟಿಗೆ ಬಲಿಯಾದುದನ್ನು ತಿಳಿದ ಸಾಕವ್ವನ ದುಃಖ ಪರಾಕಾಷ್ಠೆ ತಲುಪಿ, ಸಾವಿನಲ್ಲಿ ಕಥೆ ದುರಂತವಾಗುತ್ತದೆ ಎಂದು ಭಾವಿಸಿದರೂ, ಅವಳು ಸಾಯದೆ ಧೃಡಳಾಗಿ ನಿಂತು ಅಸ್ತಿತ್ವಕ್ಕಾಗಿ ಹೋರಾಟ ನಡೆಸುವುದೇ ದೊಡ್ಡ ದುರಂತವಾಗಿಬಿಡುತ್ತದೆ.

ದೇವನೂರರ ಒಂದೊಂದು ಅಕ್ಷರವೂ ರಂಗದಲ್ಲಿ ಮೈತಳೆದು ನಿಲ್ಲುವಂತೆ ಶ್ರಮಿಸಿದ್ದಾರೆ. ಸಿ.ಜಿ.ಕೆ. ರಂಗಕ್ಕಳವಡಿಸಲು ಅಸಾಧ್ಯ ಎಂದು ಪರಿಗಣಿಸಿದ ಕೃತಿಯನ್ನು ಛಾಲೆಂಜಾಗಿ, ಗೆಳೆಯರ ಪ್ರೋತ್ಸಾಹದಿಂದ 'ಒಡಲಾಳ'ದ ಅಂತರಂಗವನ್ನು ಕೆದಕಿರುವ ಸಿ.ಜಿ.ಕೆ. ತಮ್ಮ ಹಿಂದಿನ ಅನೇಕ ಯಶಸ್ವಿ ನಾಟಕಗಳಿಗಿಂತಲೂ ಈ ನಾಟಕವನ್ನು ಉತ್ತಮವಾಗಿ ನಿರ್ದೇಶಿಸಿದ್ದಾರೆ. ಪಾತ್ರಗಳ ಆಯ್ಕೆಯಲ್ಲಿ ಮಾತ್ರವಲ್ಲದೆ, ಅವರ ಸಣ್ಣದೊಂದು ಚಲನವಲನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದರಿಂದ ಗ್ರಾಮ್ಯ ಭಾಷೆಯ ಸೊಗಡಷ್ಟೆ ಅಲ್ಲದೆ ಅಲ್ಲಿಯ ಚಿತ್ರಣವೂ ಅಷ್ಟೇ ಗಟ್ಟಿಯಾಗಿ ನೈಜವಾಗಿ ಮೂಡಿದೆ.

"ಈ ನಾಟಕ ನನ್ನ ಭಂಡ ಧೈರ್ಯವಷ್ಟೇ ಆದರೆ ಇದರಿಂದ ನನ್ನಲ್ಲಿದ್ದ ಹಲವು ಸಂಶಯಗಳು ನಿವಾರಣೆಯಾದವು" ಎಂದು ನಾಟಕದ ಯಶಸ್ಸಿನ ಬಗ್ಗೆ ಕೇಳಿದಾಗ ಸಿಜಿಕೆ ತುಂಬು ಹೃದಯದಿಂದ ನುಡಿದರು.

"ಕಥೆ ಓದುವಾಗಲೆ ಇದು ನಾಟಕವಾದರೆ ಬಹಳ ಚೆನ್ನಾಗಿರುತ್ತೆ ಅಂತ ಅನ್ನಿಸ್ತಿತ್ತು. ಅಲ್ಲೇ ಕಥೆಯ ಪರಿಸರ ಸಾಕವ್ವ ಎಲ್ಲವೂ ನನಗೆ ಪರಿಚಿತವೆ, ಸಾಕವ್ವ ಬೇರೆ ಯಾರೂ ಅಲ್ಲ ನನ್ನ ತಾಯಿಯೇ. ಅವಳ ನಡೆ ನುಡಿ ಎಲ್ಲ ನನಗೆ ಪರಿಚಿತವಾದ್ದರಿಂದ ಊಹೆಗೆ ಇಲ್ಲಿ ಅವಕಾಶವೇ ಇಲ್ಲ, ಯಶಸ್ಸಿಗೆ ಇದು ಮುಖ್ಯ ಕಾರಣ ನನ್ನ ದೃಷ್ಟಿ, ಅನುಭವಕ್ಕೆ ಒಂದು ಸೃಷ್ಟಿ ರೂಪ ಈ ನಾಟಕ ದೊರಕಿಸಿಕೊಟ್ಟಿತು ಎಂದು ಯಶಸ್ಸಿನ ಬಗ್ಗೆ ಹಾಗೂ ಹಿನ್ನೆಲೆ ಕುರಿತು ನುಡಿದರು.

ಇಲ್ಲಿಯ ಕಲಾವಿದರು ಒಂದು ಕಗ್ಗಳ್ಳಿಯ ನಡೆ, ನುಡಿ, ಭಾಷೆಯನ್ನು ಸಹಜವಾಗಿ ಬಳಸಿರುವುದು ಒಂದು ಶ್ಲಾಘನೀಯ ವಿಷಯವೇ. "ಮೊದ ಮೊದಲು ಇವರಿಗೆ ಪ್ರತಿಯೊಂದು ಬಿಡಿಸಿ, ವಿವರಿಸಿ ಹೇಳಬೇಕಾಗಿತ್ತು. ಕಾಫಿ ಜೊತೆ ಕಳ್ಳೇಪುರಿ ಬೆರೆಸಿ ತಿನ್ತಾರಾ? ಕಡ್ಲೇಕಾಯಿ ತಿಂದು ಜೀವಿಸ್ತಾರಾ? ಅಂತ ಆಶ್ಚರ್ಯದಿಂದ ಕೇಳ್ತಿದ್ದರು. ಆದರೆ ರಿಹರ್ಸಲ್ ಮುಂದುವರೆದ ಹಾಗೆ ಅವರಿಗೆ ಪಾತ್ರ ಅರ್ಥವಾದ್ದರಿಂದ ಸಹಜವಾಗಿ ನಟಿಸಿದ್ದಾರೆ. ಅದರಲ್ಲೂ ಉಮಾ ಮತ್ತೆ ಮಾಲೂರಿನ ಹುಡುಗ ವಿಜಯಕುಮಾರ್" ಎಂದು ಕಲಾವಿದರ ಬಗ್ಗೆ ನುಡಿದರು.

ಉಮಾಳನ್ನು ಹಣ್ಣು ಮುದುಕಿಯನ್ನಾಗಿಸಲು ಕನಿಷ್ಟ ಒಂದೂವರೆ ಗಂಟೆ ಮೇಕಪ್ ನಾಣಿಯವರಿಗೆ ಹಿಡಿಸುತ್ತಿತ್ತಂತೆ, ಶಶಿಧರ ಅಡಪ ಹಾಗೂ ಅವನ ಗೆಳೆಯರು ಶ್ರಮ ಬಡಮುದುಕಿ ಹಟ್ಟಿಯಲ್ಲಿ ಎದ್ದು ಕಾಣುತ್ತಿತ್ತು. ನನಗೆ ಬೆಸ್ಟ್ ಟೆಕ್ನಿಷಿಯನ್ಸ್ ಸಿಕ್ಕಿದ್ದರಿಂದ ನನ್ನ ಅರ್ಧ ಕೆಲಸ ಹಗುರವಾಯ್ತು. ಅವರಿಗೆ ಹೀಗೆ ಅಂತ ವಿವರಿಸುವ ಅಗತ್ಯವಿಲ್ಲದ್ದರಿಂದ, ನಾಟಕದ ಯಶಸ್ಸಿಗೆ ನಾಣಿ, ಕಪ್ಪಣ್ಣ ಅಡಪ ಕೂಡ ಕಾರಣರಾಗಿದ್ದಾರೆ.

ನಾಟಕದುದ್ದಕ್ಕೂ ಪ್ರತಿ ಸಂಭಾಷಣೆಗೂ ಚಪ್ಪಾಳೆ ಪಡೆದುಕೊಂಡ ಉಮಾ ನಾನು ನಾಟಕದಲ್ಲಿ ನಟಿಸೇ ಇಲ್ಲ. ನಿರ್ದೇಶಕರು ಹೇಳಿದಂತೆ ನಟಿಸಿದ್ದೇನಷ್ಟೇ ಅಲ್ಲದೆ ಸಾಕವ್ವ ತರದೋರನ್ನ ಬಹಳ ಮಂದಿಯನ್ನು ಹತ್ತಿರದಿಂದ ನೋಡಿರುವುದರಿಂದ್ಲೇ ರವಿಕೆಯಿಲ್ದೇ, ಕೊಳಕಾಗಿ

ನಟಿಸಲು ನಂಗೆ ಅಸಹ್ಯವೂ ಆಗ್ಲಿಲ್ಲ. ಬರೀ ಸಿನಿಮಾದಲ್ಲಿ ಮಾತ್ರವಲ್ಲ, ನಾಟಕದಲ್ಲೂ ಅವಶ್ಯವಾದ್ರೆ ಈ ರೀತಿ ನಟಿಸ್ತೀನೀ" ಎಂದು ಪಾತ್ರಕ್ಕೆ ಜೀವ ತುಂಬುವ ಛಲದ ನಟಿ ಉಮಾ ಹೇಳಿದಾಗ ಅಬ್ಬ! ಎನಿಸಿತು.

ನಾಟಕದ ಯಶಸ್ಸಿಗೆ ನಿರ್ದೇಶಕ, ನಟ ಎಷ್ಟು ಮುಖ್ಯವಾಗುತ್ತಾನೋ ಅಷ್ಟೇ ಮುಖ್ಯವಾಗುತ್ತದೆ ತಂಡ ಕೂಡ. ಯಯಾತಿ, ಮಹಾಪ್ರಸ್ಥಾನ, ಸಂಗ್ಯಾ ಬಾಳ್ಯಾ ಹೋಮ, ಸನ್ನಿವೇಶ, ಸಂದರ್ಭ ಮತ್ತಿತರ ಉತ್ತಮ ನಾಟಕಗಳನ್ನು ನೀಡಿರುವ 'ರಂಗಸಂಪದ'ಕ್ಕೆ ಹತ್ತು ವರ್ಷಗಳು ದಾಟಿವೆ. ಮುಕ್ತ ಮನದಿಂದ ರಂಗಸಂಪದದ ಪ್ರೋತ್ಸಾಹವನ್ನು ಹೊಗಳಿದ ಸಿಜಿಕೆ "ಲೋಕೇಶ್ ಜೊತೆಯಲ್ಲಿಲ್ಲದಿದ್ದರೆ ಖಂಡಿತಾ ನಾನೇನೂ ಮಾಡುತ್ತಿರಲಿಲ್ಲ" ಎಂದು ಭಾವುಕರಾಗಿ ನುಡಿದರು.

"ನನ್ನ ಸಂಶಯಗಳಷ್ಟೇ ಈ ನಾಟಕದಿಂದ ದೂರವಾಯಿತು." ಎಂದ ಸಿ.ಜಿ.ಕೆ. ಮುಂದಿನ ತಿಂಗಳಿಂದ ಬಾಲನ್‌ರ "ನೇಣುಗಂಬದ ನೆರಳಲ್ಲಿ" ಅನುಭವವನ್ನು ಗಾಡ ಪರಿಚಯವನ್ನು ರಂಗದ ಮೂಲಕ ಮಾಡಿಸಲಿದ್ದಾರೆ. "ಡ್ರೀಮ್ಸ್ ಆಫ್ ಟಿಪ್ಪು" ನಾಟಕಕ್ಕಾಗಿ ಹಲವು ಸಂಶೋಧನಾ ಕಾರ್ಯಗಳನ್ನು ಹಮ್ಮಿಕೊಂಡಿರುವ ಸಿ.ಜಿ.ಕೆಯ ಬಹು ದೊಡ್ಡ ಡ್ರೀಮ್.

**ಮುಂಜಾನೆ**

**ಹೊಸ 'ಸೃಷ್ಟಿ'ಗೆ ತುಡಿವ ಮಹಾಚೈತ್ರ**

ರಂಗಸಂಪದ ೨೪ ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ಎಚ್.ಎಸ್. ಶಿವಪ್ರಕಾಶರ ಈ ನಾಟಕ ಗಹನ ವಸ್ತುವೊಂದರ ಪರಿಣಾಮಕಾರಿ ರಂಗಪ್ರಯೋಗ.

ನವ ಪಲ್ಲವದ ಆಶಯವನ್ನು ಹೊತ್ತ "ಮಹಾಚೈತ್ರ"ದ ವಸ್ತು ಬಸವಣ್ಣ ತೊರೆದ ನಂತರ ಕಲ್ಯಾಣದ ಬದುಕು, ಬಸವಣ್ಣ ನಾಟಕದಲ್ಲಿ ಬರುವುದಿಲ್ಲವಾದರೂ ಅವನ ಕಲ್ಪನೆಯ ಸಮಾಜ, ಅವನ ಆದರ್ಶ ವಿಚಾರಗಳು ನಾಟಕದುದ್ದಕ್ಕೂ ಪರವಿರೋಧಗಳಲ್ಲಿ ಹೆಣೆದುಕೊಂಡು ಒಂದು ಚಾಲಕಶಕ್ತಿಯಾಗಿ ಪರಿಣಮಿಸುತ್ತದೆ. ಬಸವಣ್ಣ ಆರಂಭಿಸಿದ ಸಾಮಾಜಿಕ ಚಳವಳಿಯನ್ನು ಮುಂದುವರಿಸಿ ಅವನ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಬಹುರೂಪಿ ಚೌಡಯ್ಯ ಮೊದಲಾದವರು ತೊಡಗುತ್ತಾರೆ. ಆಸ್ಥಾನದ ರಾವುಗಣ್ಣಿಗೆ ಗುರಿಯಾಗುತ್ತಾರೆ. ಬಿಜ್ಜಳನ ಕ್ರೌರ್ಯವನ್ನು ಹತ್ತಿಕ್ಕುವ ಕ್ರಿಯೆಯಲ್ಲಿ ನಾಟಕ ಅವನ ಕೊಲೆಯಲ್ಲಿ ಕ್ರಾಂತಿಯ ಶಿಖರ ಮುಟ್ಟಿ ಚೈತ್ರದ ಬೆಳಕಿನಲ್ಲಿ ಸೃಷ್ಟಿಯ ಮಾತನಾಡುತ್ತಾ ಮುಕ್ತಾಯಗೊಳ್ಳುತ್ತದೆ. ಇತಿಹಾಸದ ಶರೀರಕ್ಕೆ ದಕ್ಷಬ್ರಹ್ಮ ಯಜ್ಞದ ಪುರಾಣ ಪ್ರಸಂಗದ ಕಿರೀಟವಿಟ್ಟು ಬಿಜ್ಜಳದ ಕ್ರೂರ ವ್ಯವಸ್ಥೆಗೆ ಪರಿಸಮಾಪ್ತಿ ಹೇಳುವ ನಾಟಕಕಾರರು ನವ ಚೈತ್ರದ ಉದಯದಲ್ಲಿ ಸೃಷ್ಟಿಯ ಮಾತನಾಡುತ್ತಾ ಹೊಸ ಸಮಾಜ ಕಟ್ಟುವ ಕನಸನ್ನು ಧ್ವನಿಸುತ್ತಾರೆ.

ಸೃಜನಾತ್ಮಕ ನಿರ್ದೇಶಕನಿಗೆ ಸವಾಲಾಗುವಂಥ ಶಕ್ತಿಯುತವಾದ ವಸ್ತುವನ್ನು ಹೊಂದಿರುವ "ಮಹಾಚೈತ್ರ"ವನ್ನು ನಿರ್ದೇಶಕ ಸಿ.ಜಿ. ಕೃಷ್ಣಸ್ವಾಮಿ ಕೃತಿಯ ಆಶಯವನ್ನು ಜನಕ್ಕೆ ಕಣ್ಣಿಗೆ ಕಟ್ಟುವಂಥ ದೃಶ್ಯಗಳ ಮುಖೇನ ತಲುಪಿಸುವುದರಲ್ಲಿ ಯಶಸ್ವಿಯಾದರು. ಹಂತ ಹಂತವಾಗಿ ಸಂಘರ್ಷವನ್ನು ಆಲೋಚನೆ ಮತ್ತು ಕ್ರಿಯೆಗಳಲ್ಲಿ ಹುರಿಗಟ್ಟಿಸುವ ನಾಟಕದ ಪರಿಯಿಂದಾಗಿಯೋ ಏನೋ ಮೊದಲ ಅರ್ಧದಲ್ಲಿ ಸ್ವಲ್ಪ ಎಳೆಯಿತು. ಅಲ್ಲಲ್ಲಿ ನಿಂತಂತೆ ಭಾಸವಾಯಿತು. ನಾಟಕದ ಆಶಯದ ನಿರೂಪಣೆಗೆ ನಿರ್ದೇಶಕರು ಮೇಳದಂತೆ ನಿರ್ವಹಿಸಿದ ಆಟಗಾರರನ್ನು ಪಾತ್ರಗಳನ್ನಾಗಿ ನಿರೂಪಕರನ್ನಾಗಿ ಸಮರ್ಥವಾಗಿ ಬಳಸಿಕೊಂಡರು. ಕಲ್ಯಾಣ ತೊರೆದು ಸಂಗಮಕ್ಕೆ ಹೋದ ಬಸವಣ್ಣನ ಬಗ್ಗೆ ನೀಲಾಂಬಿಕೆಗೆ ಹೇಳುವಾಗ ಅವನ ಮನಸ್ಸಿನ ದ್ವಂದ್ವ ನಿರೂಪಿಸುವ ದೃಶ್ಯ ದಕ್ಷಬ್ರಹ್ಮ ಯಜ್ಞ ಹಾಳುಗೆಡಹುವ ವೀರಭದ್ರ ನೃತ್ಯ. ಮೇಲಿನ ಮಾತಿಗೆ ನಿದರ್ಶನ. ಬಿಜ್ಜಳನ ದುಃಸ್ವಪ್ನದ ಸನ್ನಿವೇಶದಲ್ಲಿ ಪಂಜುಗಳನ್ನು ಕಟ್ಟಿಕೊಂಡ ಪಾತ್ರಧಾರಿಗಳ ಬಳಕೆಯಿಂದ

ಭ್ರಮಾತ್ಮಕ ವಾತಾವರಣ ಸೃಷ್ಟಿಸಿದ್ದು ನಿರ್ದೇಶಕರ ಕಲ್ಪನಾ ಸಾಮರ್ಥ್ಯಕ್ಕೆ ಮತ್ತೊಂದು ನಿದರ್ಶನ. ಬಸವಣ್ಣನವರ ದೇಹಾವಸಾನದ ನಿರೂಪಣೆಯಲ್ಲಿ ಪುನರಾವರ್ತನೆ (ಒಮ್ಮೆ ನೀಲಾಂಬಿಕೆಗೆ ಮತ್ತೊಂದು ಮಾಚಿ ದೇವರ ತಂಡಕ್ಕೆ) ತಪ್ಪಿಸಬಹುದಿತ್ತು. ಮಂತ್ರಿ ಪದವಿಯ ಮೇಲೆ ಕಣ್ಣಿಟ್ಟಿರುವ ಮುಕಂದಭಟ್ಟನ ಪಾತ್ರವನ್ನು ವಿದೂಷಕ ಬ್ರಾಹ್ಮಣನಂತೆ ಪರಿಭಾವಿಸಿದ್ದು ಹಾಗೂ ಬಿಜ್ಜಳನ ಆಸ್ಥಾನದ ದೃಶ್ಯವನ್ನು ನಗೆಚಾಟಿಕೆಯಂತೆ ನಡೆಸಿದ್ದು ಮನವರಿಕೆಯಾಗುವಂತಿರಲಿಲ್ಲ.

ಅಭಿನಯದಲ್ಲಿ ನಾಲ್ವರು ಆಟಗಾರರು (ವಿಶೇಷವಾಗಿ ರಾಮಮೂರ್ತಿ) ಬಿಜ್ಜಳನಾಗಿ ರಂಗಸ್ವಾಮಿ, ಮಡಿವಾಳ ಮಾಚಿದೇವನಾಗಿ ರುದ್ರಮೂರ್ತಿ, ಹಡಪದ ಅಪ್ಪಣ್ಣನಾಗಿ ರಮೇಶ್ ಚಂದಾ ಉಲ್ಲೇಖನಾರ್ಹರು. ರಾಜೀವ ತಾರಾನಾಥರ ಸಂಗೀತ ಮತ್ತು ಬೆಳಕು (ಕೃಷ್ಣಸ್ವಾಮಿ ಮತ್ತು ಲೋಕೇಶ್) ನಾಟಕದ ಅರ್ಥವಂತಿಕೆಗೆ ಪೂರಕವಾಗಿದ್ದವು.

**ಪ್ರಜಾವಾಣಿ**

**ಹೊಸ ಅರ್ಥ ವಿವರಣೆಯ ಪ್ರಯತ್ನ**

ರಂಗಸಂಪದ ಗುರುವಾರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ಗಿರೀಶ್ ಕಾರ್ನಾಡರ "ಯಯಾತಿ" (ನಿರ್ದೇಶನ ಸಿ.ಜಿ. ಕೃಷ್ಣಸ್ವಾಮಿ) ಹಿಂದಿನ ಪ್ರಯೋಗಗಳಿಗಿಂತ ವಿಭಿನ್ನ ದೃಷ್ಟಿಕೋನದಲ್ಲಿ ನಿರೂಪಿಸುವ ಪ್ರಯತ್ನದಲ್ಲಿ ಹಾಗೂ ಉತ್ಕಟ ನಾಟಕೀಯತೆಯಲ್ಲಿ ಗಮನಾರ್ಹವೆನಿಸಿತು.

ಶುರುವಿಗೆ ದಾಸಿಯ ಮೂಲಕ ನಾಟಕದ ಪಾತ್ರಗಳನ್ನು ಪರಿಚಯಿಸುವುದರಲ್ಲಿ ಪುರಾಣ-ಇತಿಹಾಸಗಳನ್ನು ಬೇರೊಂದು ದೃಷ್ಟಿಕೋನದಿಂದ ನೋಡುವ ನಿರ್ದೇಶಕರ ಆಶಯ ಸ್ಪಷ್ಟವಾಯಿತು. ಪರಿಚಯದ ಹಂತ ದಾಟಿ ಪ್ರಯೋಗ ಮೂಲನಾಟಕಕ್ಕೆ ತೆರೆದುಕೊಂಡಾಗ ಹೊಸ ಅರ್ಥವಿವರಣೆ ಏನೂ ಸಾಧ್ಯವಾಗದೆ ಕೇವಲ ನಾವೀನ್ಯತೆಯಿಂದಾಗಿ ಇದು ಪ್ರಯೋಗದ ವೈಶಿಷ್ಟ್ಯವೆನಿಸಿತು. ಬೇರೊಂದು ದೃಷ್ಟಿಕೋನದಿಂದ ನೋಡುವ ಪ್ರಯತ್ನದಲ್ಲಿ ಹೊಸ ಅರ್ಥ ಹೊರಡಿಸಲು ನಿರ್ದೇಶಕರು ಅವುಟಗಳಿಗಿಳಿಯದೇ ಮೂಲದಾಕರ್ಷಣ ಕೇಂದ್ರದ ಗತಿಯಲ್ಲೇ ನಿರೂಪಿಸಿದ್ದು ಸಮಾಧಾನಕರ ಅಂಶ.

ಸರಳ ರಂಗಸಜ್ಜಿಕೆ (ರಂಗವಿನ್ಯಾಸ ಶಶಿಧರ್ ಅಡಪ ಮತ್ತು ಸಿಜಿಕೆ) ಯಲ್ಲಿ ಕಾಮನೆ ಮತ್ತು ಜೀವನ ಸೌಂದರ್ಯಗಳನ್ನು ಸಂಕೇತಿಸುವ ಸಿಂಬಿಸುತ್ತಿದ್ದ ಸರ್ಪ ಮತ್ತು ನವಿಲುಗಳನ್ನು ವಸ್ತು ಪ್ರತಿರೂಪವಾಗಿ ಬಳಸಿಕೊಂಡು ನಾಟಕದ ಅರ್ಥವಂತಿಕೆಯನ್ನು ದೃಶ್ಯ ಮುಖೇನ ಹೆಚ್ಚಿಸಿದ ಪ್ರಯೋಗ ಯಯಾತಿಯ ಅಮರತ್ವದ ಆಕಾಂಕ್ಷೆ ಶರ್ಮಿಷ್ಠೆಯ ಮನುಷ್ಯತ್ವದ ಹಂಬಲ ವಂಶ ಭಾರದಿಂದ ನರಳುತ್ತ ಹೊಸ ವ್ಯಕ್ತಿತ್ವಕ್ಕಾಗಿ ಚಡಪಡಿಸುವ ಪುರುವಿನ ಅಸಹಾಯಕತೆ ಇವೆಲ್ಲದರಲ್ಲಿ ಸನ್ನಿವೇಶದಿಂದ ಸನ್ನಿವೇಶಕ್ಕೆ ದುರಂತ ಉತ್ಕಟವಾಗಿ ಹುರಿಗಟ್ಟಿಕೊಳ್ಳುತ್ತಾ ಪ್ರೇಕ್ಷಕರನ್ನು ಹಿಡಿದಿರಿಸಿತು. ಕೊನೆಯಲ್ಲಿ, "ಇದೆಲ್ಲದರ ಅರ್ಥವೇನು, ದೇವರೆ, ಅರ್ಥವೇನು" ಎಂಬ ಮೂಲದ ಸಂಭಾಷಣೆಗೆ ಬದಲಾಗಿ ಬಂದ ಪುರುವಿನ "ಮುಂದೇನು" ಎಂಬ ಮಾತು ದುರಂತದ ಆರ್ತಧ್ವನಿಯಾಗಿ ಬರದೆ ಅಸಹಾಯಕತೆಯ ಕೊರಗಿನಂತೆ ಕೇಳಿಸಿತು. "ಮುಂದೇನು" ಎಂಬುದು ಮೂಲದ ಮಾತಿಗಿಂತ ಹೆಚ್ಚು ಪರಿಣಾಮಕಾರಿಯಾದ ಅಭಿವ್ಯಕ್ತಿ ಎಂದು ನಿರ್ದೇಶಕರು ಭಾವಿಸಿದ್ದರೆ ಅದು ಪ್ರಯೋಗದಲ್ಲಿ ಹಾಗೆ ಕೇಳಿಸಲಿಲ್ಲ.

ಪಾತ್ರಗಳ ಆಯ್ಕೆ ಮಾತು ಬಂದಾಗ ಪುರು ಪಾತ್ರದ ಆಯ್ಕೆಯಲ್ಲಿ ನಿರ್ದೇಶಕರು ಎಡವಿದ್ದಾರೆ ಎನ್ನಬೇಕು. ಸುರ-ಅಸುರರ ರಕ್ತ ಹಂಚಿಕೊಂಡು ಹುಟ್ಟಿದ, ತಂದೆಗೆ ತನ್ನ ಯೌವನ ಧಾರೆ ಎರೆದುಕೊಡುವ ಪುರ ನಿತ್ರಾಣಿಯಾಗಿ, ಕೆಲವೊಮ್ಮೆಯಂತೂ ಮಾತು-ಅಭಿನಯಗಳಲ್ಲಿ ವಿದೂಷಕನಂತೆ ಕಂಡು ಪ್ರೇಕ್ಷಕರು ನಗುವಂತಾದದ್ದು ರಸಪೋಷಣೆಗೆ ಭಂಗವಾಯಿತು. ಅಭಿನಯದಲ್ಲಿ ಶರ್ಮಿಷ್ಠೆಯಾಗಿ

ಗಿರಿಜಾ ಲೋಕೇಶ್‌ಗೆ ಮೊದಲ ಪ್ರಶಂಸೆ ಸಲ್ಲಬೇಕು. ಯಯಾತಿಯಾಗಿ ನಾಗೇಶ್‌ಕಶ್ಯಪ್, ಚಿತ್ರಲೇಖೆಯಾಗಿ ವೈಜಯಂತಿ ವಿಜಯಕಾಶಿ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಬೆಳಕು (ಜೆ. ಲೋಕೇಶ್) ಮತ್ತು ಧ್ವನಿ (ಬಿ.ಎಸ್. ರಾಮಮೂರ್ತಿ ಮತ್ತು ನಾಗೇಶ್) ಪ್ರಯೋಗಕ್ಕೆ ಪೂರಕವಾಗಿದ್ದವು.

**ಪ್ರಜಾವಾಣಿ**

**ನೀಗಿಕೊಂಡ ಸಂಸ**

ಖ್ಯಾತ ಸಾಹಿತಿಗಳು, ಕವಿಗಳು, ನಾಟಕಕಾರರು, ನಟರುಗಳ ಜೀವನ ಚರಿತ್ರೆಗಳನ್ನಾಧರಿಸಿ, ರಚಿಸಿದ ನಾಟಕಗಳನ್ನಾಡುವುದು ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ದಿನಗಳಿಂದಲೂ ಇದ್ದದ್ದೇ. ಚಾರ್ಲ್ಸ್ ಡಿಕನ್ಸ್. ಷಾ, ಅಸ್ಕರ್ ವೈಲ್ಡ್, ವಿಲಿಯಮ್ ಫಾಕ್ನರ್ ಮುಂತಾದವರ ಬಗ್ಗೆ ನಾಟಕಗಳು ಏಕಪಾತ್ರಾಭಿನಯಗಳನ್ನು, ವಾಚನಗಳನ್ನು ನೋಡಿದ್ದೇವೆ, ಕೇಳಿದ್ದೇವೆ. ಕನ್ನಡದಲ್ಲಿ ಇತ್ತೀಚೆಗೆ ಈ ಜಾಡು ಪ್ರಾರಂಭವಾಗಿದೆ. ಟಿಪಿಕಲ್ ಟಿ.ಪಿ. ಕೈಲಾಸಂನ ಯಶಸ್ಸಿನ ಹಿಂದೆಯೇ ಈ ನಿಟ್ಟಿನಲ್ಲಿ ಇತ್ತೀಚಿನ ಪ್ರಯೋಗ ಕಿ.ರಂ. ನಾಗರಾಜ ವಿರಚಿತ "ನೀಗಿಕೊಂಡ ಸಂಸ" ರಂಗಸಂಪದ ತಂಡಕ್ಕೆ. ಈ ನಾಟಕವನ್ನು ನಿರ್ದೇಶಿಸಿದವರು ಸಿ.ಜಿ. ಕೃಷ್ಣಸ್ವಾಮಿ.

ನಾಟಕಕಾರ ಹೇಳಿರುವಂತೆ 'ಸಂಸ'ರ ನಿಗೂಢ ಮನೋಜೀವನ ಹಾಗೂ ಅವರ ನಾಟಕಗಳು ಒಳಸುಳಿಗಳ ಅಂತರ್ ಸಂಬಂಧವೇ "ನೀಗಿಕೊಂಡ ಸಂಸ" ನಾಟಕದ ವಸ್ತು. ಈ ಸಂಸರಿಗಿದ್ದ ಸಮಸ್ಯೆ Persecution Complex- ಅವರ ಸುತ್ತಮುತ್ತಲಿದ್ದ ಜನವೆಲ್ಲ ತಮ್ಮನ್ನು ತುಳಿಯಲು, ಹಿಂಸಿಸಲು ಮಾತ್ರ ಪಣ ತೊಟ್ಟಿದ್ದಾರೆಂಬ ದೃಢನಂಬಿಕೆ. ಅವರ "ಸ್ನೇಹಿತರು" ಪ್ರಕಾಶಕರು, ಮುಂತಾದವರೊಂದು ಕಡೆಯಾದರೆ ಮೈಸೂರನ್ನಾಳುತ್ತಿದ್ದ ಮಹಾರಾಜರು ಅವರ ಆಸ್ಥಾನ ವಿದ್ವಾಂಸರಿನ್ನೊಂದು ಕಡೆ. ದೇಶವನ್ನೇ ಆಳುತ್ತಿದ್ದ ಬ್ರಿಟಿಷರು ಮತ್ತೊಂದು ಕಡೆ. ಈ ಮೂರು ದಿಕ್ಕುಗಳಿಗೆ ಬೆನ್ನು ತಿರುಗಿಸಿ ಹೊರಟು ಹೋಗಬೇಕೆಂಬ ಸಂಸರ ದೇಶಾಟನೆಗಳಿಗೆ ಅಡ್ಡಬರುತ್ತಿದ್ದುದು. ಒಂದು ವಿಧದಲ್ಲಿ ನೋಡಿದರೆ ದಿನದಿನಕ್ಕೂ ಸಂಕುಚಿತವಾಗುತ್ತಿದ್ದ ಅವರ ಮನೋದಿಗಂತವೆಂದೇ ಕಾಣುತ್ತದೆ. ಹೀಗಾಗಿ ಎಲ್ಲಿ ಹೋದರೂ ಮತ್ತೆ ಮೈಸೂರಿಗೇ ವಾಪಸ್ ಮತ್ತೆ ತಮ್ಮ ರೂಢ ನಂಬಿಕೆಯ ಮಾಯಾಕೃತಿಗಳ ವಿರುದ್ಧ ಹೋರಾಟ. ಎ.ಆರ್. ಕೃಷ್ಣಶಾಸ್ತ್ರಿ, ಗೋವಿಂದ ಪೈ, ಪಂಜೆ ಮಂಗೇಶರಾವ್ ಮುಂತಾದವರೆಲ್ಲಾ ಪಿತೂರಿ ನಡೆಸಿದ್ದರ ಪರಿಣಾಮವಾಗಿ ಸಂಸರದ್ದು ಉಳಿದಿರುವುದು ಆರು ನಾಟಕಗಳು. ಅವರು ಬರೆದಿದ್ದು ಮೂವತ್ತಕ್ಕೂ ಹೆಚ್ಚಂತೆ, ಯಾರನ್ನೂ ನಂಬದಿರುವ ಸ್ಥಿತಿಯಲ್ಲೇ ಬಹಳ ದಿನ ನರಳಿದ ಈ ವ್ಯಕ್ತಿ ಒಂದು ಸಲ ಫಾರೆಸ್ಟ್ ಗಾರ್ಡ್ ಆಗಿದ್ದ ತಮ್ಮ ಸ್ನೇಹಿತನೊಬ್ಬ ಮನೆಗೆ ಬಂದಾಗ ಕಿಟಕಿಯಿಂದ ನೋಡಿ ಈತ ಪೋಲೀಸನಿರಬೇಕೆಂದೂ, ತಮಗೆ ತೊಂದರೆ ಕೊಡಲು ಬಂದಿರ ಬೇಕೆಂದುಕೊಂಡು ಅಂದಿನಿಂದ ಆತನನ್ನು ತಮ್ಮ ಮನೆಗೇ ಸೇರಿಸಲ್ಲಿಲ್ಲವಂತೆ. ಈ ಮಾದರಿಯ ಕೇಸ್‌ಗಳಲ್ಲನೇಕ ಸಲ ಆಗುವಂತೆ ಪರದೆ ಬೀಳುವುದು ವ್ಯಕ್ತಿಯ ಆತ್ಮಹತ್ಯೆಯಲ್ಲಿ, ಸಂಸರದ್ದು ನಾಟಕ ಹಾಗೆಯೇ ಮುಗಿಯುತ್ತೆ.

ಈ ಮಾದರಿಯ ನಾಟಕಗಳ ಯಶಸ್ಸು ಈ ದಿವಂಗತ ವ್ಯಕ್ತಿಗಳು ಎಷ್ಟು ವರ್ಣರಂಜಿತರಾಗಿದ್ದರು ಎಂಬುದರ ಮೇಲೆ ಆಧಾರಿತವಾಗಿರುತ್ತದೆ. ಕೆಲವರು ಒಳ್ಳೆ ಕೃತಿಗಳನ್ನು ಸೃಷ್ಟಿಸಿದರೂ ವೈಯುಕ್ತಿಕ ಜೀವನದಲ್ಲಿ ಅಷ್ಟೇ ಸಪ್ಪೆಯಾಗಿರುವುದು, ಕೆಟ್ಟ ಅಥವಾ ಸಾಧಾರಣ ಬರಹಗಾರರು ಬಹಳ ಕಲರ್ ಫುಲ್ ಪರ್ಸನಾಲಿಟಿಗಳಾಗಿರುವುದೂ ಸಾಮಾನ್ಯ, ನಾಟಕ ನೋಡಿದ ಮೇಲೆ ಸಂಸ ಯಾವ ತರದವರು ಎಂದು ಬಗೆಹರಿಯಲಿಲ್ಲ.

ಕನ್ನಡದ ಈ ಹೊಸ ನಾಟಕ ಮಾತುಗಳು ಕೊಂಚ ಜಾಸ್ತಿಯೆನಿಸಿದರೂ, ಸಂಸರ ವಿವಿಧ ಗೊಂದಲಗಳನ್ನು ಹೆಣೆದಿರುವುದರ ರೀತಿ ಕೊಂಚ ಗಲಿಬಿಲಿಯಿಂದ ಕೂಡಿದಂತಿದ್ದರೂ ಚೆನ್ನಾಗಿತ್ತು. ಸಿಜಿಕೆ ನೀಟಾಗಿ ನಾಟಕ ಮಾಡಿಸಿದ್ದರು. ನಾಗಾಭರಣ ಸಂಸರೊಂದಿಗೆ

ಧೀರೋದಾತ್ತವಾಗಿ ಹೋರಾಡಿದರು. ವೈಯುಕ್ತಿಕವಾಗಿ ನನಗೆ ಅನ್ನಿಸಿದ ಇನ್ನೊಂದು ಅಂಶವೆಂದರೆ, ರಂಗದ ವಿಸ್ತಾರವನ್ನು ಇನ್ನೂ ಹೆಚ್ಚಿಗೆ ಉಪಯೋಗಿಸಬಹುದಿತ್ತು. ಆಗ ನಾಟಕದ ನಾಯಕನ ಮನಸ್ಸಿಗೂ, ಅವನ ಹೊರಗಿನ ವಿಶಾಲ, ಉದಾಸೀನ ಪ್ರಪಂಚಕ್ಕೂ ಇದ್ದ ಹಂದರವನ್ನು ಇನ್ನೂ ಪರಿಣಾಮಕಾರಿಯಾಗಿ ತೋರಿಸಬಹುದಿತ್ತು. ಇಡೀ ಸೆಟ್ ಅಲ್ಲಾಡುವಂತಹ ನಾಟಕಗಳನ್ನಾಡಿಸಿ ನಟನಟಿಯರಿಗೆ ತೊಂದರೆ ಕೊಟ್ಟಿರುವ ನನ್ನಂತಹವರಿಗೂ ಈ ನಾಟಕದ ರಂಗವಿನ್ಯಾಸ, ರಂಗ ಸಜ್ಜಿಕೆಯನ್ನು ಇನ್ನೂ ಬೇರೆ ತರಹ ಮಾಡಬಹುದಿತ್ತೇನೋ ಅನ್ನಿಸಿತು.

**ಲಂಕೇಶ ಪತ್ರಿಕೆ**

**ವೈಶಂಪಾಯನ ತೀರ : ಸೀಮಿತಗೊಳ್ಳುವ ಅರ್ಥಗಳು**

ಮೊದಲ ದೃಶ್ಯದಲ್ಲೇ ಜಕ್ಕಣಿಯ ಮುಖವಾಡ ತೊಟ್ಟ ಕಲ್ಯಾಣಿ ತನ್ನ ದುರಂತಕ್ಕೆ ನಿಮಿತ್ತವಾದ ಯಕ್ಷಗಾನ ಕುರಿತ ತನ್ನ ಆಕ್ರೋಶವನ್ನು ಕಾರಿಕೊಳ್ಳುತ್ತಾ 'ವೈಶಾಂಪಾಯನ ತೀರ' ನಾಟಕದ (ಕತೆ: ಮಹಾಬಲಮೂರ್ತಿ ಕೊಡ್ಲಕೆರೆ, ರೂಪಾಂತರ: ಎಲ್.ಎನ್. ಮುಕುಂದರಾಜ್, ನಿರ್ದೇಶನ: ಸಿಜಿಕೆ, ಅಭಿನಯ: ಹಂದರ) ಕೇಂದ್ರ ವಸ್ತುವನ್ನೂ ಸೂಚಿಸುತ್ತಾಳೆ. ಕಲಾವಿದರ 'ರಂಗಭೂಮಿ ವ್ಯಕ್ತಿತ್ವ' ಹಾಗೂ ಖಾಸಗಿ ವ್ಯಕ್ತಿತ್ವಗಳ ಸಂಘರ್ಷ ಕುರಿತ ಈ ನಾಟಕ, ನಾಟಕಕಾರ-ನಿರ್ದೇಶಕರಿಬ್ಬರೂ ತಂತಮ್ಮ ಕ್ಷೇತ್ರಗಳನ್ನು ಹೆಚ್ಚು ಸೂಕ್ಷ್ಮವಾಗಿ ನಿರ್ವಹಿಸಿದ್ದರೆ ಆಕರ್ಷಕ ಪ್ರಯೋಗವಾಗಬಹುದಿತ್ತು.

ರಂಗದ ಮೇಲೆ ಸಾಮಾನ್ಯವಾಗಿ ಪರಸ್ಪರ ವಿರೋಧಿ ಪೌರಾಣಿಕ ಪಾತ್ರಗಳನ್ನು ನಿರ್ವಹಿಸುವ ಕೃಷ್ಣಭಟ್ಟ ಹಾಗೂ ವೆಂಕಪ್ಪ ಹೆಗಡೆ ರಂಗದಾಚೆಯ ವಾಸ್ತವದಲ್ಲೂ ಮುಖಾಮುಖಿಯಾಗುವುದು ಕೃಷ್ಣಭಟ್ಟನ ಹೆಂಡತಿ ಕಲ್ಯಾಣಿಯನ್ನು ವೆಂಕಪ್ಪ ಒಲಿಸಿಕೊಂಡಾಗ ಮುಕುಂದರಾಜರ ನಾಟಕ ಗ್ರಹಿಸಿರುವ ಒಂದು ಕುತೂಹಲಕರ ಅಂಶವೆಂದರೆ, ಭಾನುಮತಿಯ ಜೊತೆ ನೆತ್ತವನಾಡಿದ ಪ್ರಸಂಗದಲ್ಲಿ ಕರ್ಣನಾಗಿ ದುರ್ಯೋಧನನ ಉದಾತ್ತತೆಯಿಂದ ಏನನ್ನೂ ಕಲಿಯದ ವೆಂಕಪ್ಪ, ರಾವಣನಿಂದ ಹೆಚ್ಚು ಕಲಿತಿರುವುದು! ಆಘಾತದಿಂದ ಊರು ಬಿಡುವ ಕೃಷ್ಣಭಟ್ಟ ಮರಳಿ ಬಂದಾಗ, ನಾಟಕದ ಅಂಬೆಯಂತೆ ಭೀಷ್ಮ ಹಾಗೂ ಸಾಲ್ವರಿಬ್ಬರಿಂದಲೂ ತ್ಯಜಿಸಲ್ಪಟ್ಟ ಕಲ್ಯಾಣಿ ಹುಚ್ಚಿಯಾಗಿದ್ದಾಳೆ. ಅವಳ ಒತ್ತಾಸೆಯಿಂದ ಮತ್ತೆ ಗೆಜ್ಜೆ ಕಟ್ಟುವ ಕೃಷ್ಣಭಟ್ಟ ದುರ್ಯೋಧನನ ಪಾತ್ರಧಾರಿ ವೆಂಕಪ್ಪನನ್ನು 'ಗದಾಯುದ್ಧ' ಪ್ರಸಂಗದಲ್ಲಿ ಕೊಂದೇಬಿಡುತ್ತಾನೆ. ಆದರೆ, ಈರ್ಷ್ಯೆ ತಂದ ದುರಂತವಿದು ಎಂದು ಘೋಷಿಸುವ ಮೇಳದಿಂದಾಗಿ ಈ ಸನ್ನಿವೇಶದ ಅರ್ಥಗಳೇ ಸೀಮಿತವಾಗುತ್ತವೆ.

ಯಕ್ಷಗಾನದ ಪ್ರಸಂಗಗಳನ್ನೇನೋ ಸಿಜಿಕೆ ಕಳೆಗಟ್ಟುವಂತೆ ನೋಡಿಕೊಳ್ಳುತ್ತಾರೆ. ಆದರೆ ಈ ಪ್ರಸಂಗಗಳ ಅರ್ಥಗಳನ್ನು ಪ್ರತಿಧ್ವನಿಸುವ ಸಮಾನಾಂತರ ದೃಶ್ಯಗಳತ್ತ ನಿರ್ದೇಶಕ ನಾಟಕಕಾರರಿಬ್ಬರಿಗೂ ಹೆಚ್ಚು ಗಮನವಿದ್ದಂತಿಲ್ಲ. ಭಾನುಮತಿ ಪ್ರಸಂಗದಲ್ಲಿ ಮಾತ್ರ ಅಂಥ ಪ್ರಯತ್ನವಿದೆ. ವಾಚಾಳಿತನ ಹಾಗೂ ದ್ವಂದ್ವಾರ್ಥಗಳಿಂದಾಗಿ ಹೋಟಲ್ ದೃಶ್ಯಗಳು ಕಾಲೇಜು ನಾಟಕದ ಮಟ್ಟಕ್ಕಿಳಿಯುತ್ತವೆ. ಆಡುಮಾತಂತೂ ಹವ್ಯಕ ಕನ್ನಡ ಹಾಗೂ ಮೈಸೂರು ಕನ್ನಡದ ವಿಚಿತ್ರ ಮಿಶ್ರಣವಾಗಿದೆ. ಆರಂಭದಲ್ಲಿ ಹಾಗೂ ವಿಚಾರಣೆಯ ದೃಶ್ಯದಲ್ಲಿ ಕೊಂಚ ಮಿನುಗುವ ಮುಕುಂದರಾಜರ ಕಾವ್ಯಕ್ಕೆ ಹೆಚ್ಚಿನ ಧ್ವನಿಶಕ್ತಿಯಿಲ್ಲ. ಮಂದ ಬೆಳಕಲ್ಲಿ ಹರಡಿಕೊಳ್ಳುವ ಕೆಂಪು ಸೀರೆಯ ಆಚೀಚೆ ನಿಂತ ಪ್ರಣಯಿಗಳ ದೃಶ್ಯ ಹಾಗೂ ಕಲ್ಯಾಣಿ ಮರಳಿ ಗಂಡನಿಗೆ ಗೆಜ್ಜೆ ತೊಡಿಸುವ ಭಾಗಗಳಲ್ಲಿ ಮಾತ್ರ ಸಿಜಿಕೆ ವೈಶಿಷ್ಟ್ಯವಿದೆ. ನಟನೆಯಲ್ಲಿ ಮಂಜುನಾಥ್ ಕುಂದಾಪುರ್, ಸದಾನಂದ್ ಭಟ್, ಗೀತಾ ಸುರತ್ಕಲ್ ಗಮನ ಸೆಳೆದರು. ಮೇಳನಾಯಕನಿಗಿಂತ, ಚಂಡೆಯ ಗುಂಡ್ಮಿ ರಘುರಾಂ ಹಾಡಿದ ಯಕ್ಷಗಾನದ ಮಟ್ಟುಗಳು ಹೆಚ್ಚು ಶಾಸ್ತ್ರೀಯವಾಗಿದ್ದವು. ಜಿ.ವಿ. ಅತ್ರಿ ಸಂಗೀತದಲ್ಲಿ ಶಿವರಂಜನಿಯ ಅಬ್ಬರದ ಜೊತೆಗೆ,

ಪಂಪನ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಪದ್ಯದ ಮೊದಲ ಸಾಲು ರವಿಚಂದ್ರನ್ ಸಿನಿಮಾದ 'ಮೋಸಗಾರನ…. ಹೃದಯಶೂನ್ಯನ' ….ಎಂಬ ಹಾಡಿನ ಟ್ಯೂನ್‌ನ್ನು ನೆನಪಿಗೆ ತರುತ್ತಿತ್ತು.

**ಲಂಕೇಶ್ ಪತ್ರಿಕೆ**

**ತಂತ್ರ ಸಮೃದ್ಧಿಯ 'ಸುರಪುರ ನಾಯಕ'**

ಸ್ವಾತಂತ್ರ್ಯ ಗಂಗೆಯನ್ನು ಸಮೃದ್ಧಗೊಳಿಸಿದ ಸಾವಿರಾರು ತೊರೆಗಳಲ್ಲಿ 'ಸುರಪುರದಿಂದ ಹರಿದುಬಂದ ತೊರೆಯೂ ಒಂದು. ಈ ತೊರೆಯನ್ನು ಸ್ವಾತಂತ್ರ್ಯ ಗಂಗೆಯತ್ತ ಕೊಂಡೊಯ್ದು ಭಗೀರಥ ಕೇವಲ ಇಪ್ಪತ್ನಾಲ್ಕು (೧೮೩೪-೫೮) ವರ್ಷ ಬದುಕಿದ್ದ ಸುರಪುರದ ವೀರ ವೆಂಕಟಪ್ಪ ನಾಯಕ.

ಬ್ರಿಟಿಷರ ಭಾಷೆ, ತಂತ್ರಗಳನ್ನು ಅವರಿಂದಲೇ (ಬ್ರಿಟಿಷ್ ಅಧಿಕಾರಿ ಮೆಡೋಸ್ ಟೇಲರ್) ಕಲಿತು ಅವರಿಗೇ ತಿರುಮಂತ್ರವನ್ನು ಹೇಳಿ, ಹೋರಾಡಿ ಮಡಿದ ಧೀರ ಸಾಮಂತ ವೆಂಕಟಪ್ಪ ನಾಯಕನ ಸಾಹಸ ಗಾಥೆಯನ್ನು ಚಿತ್ರಿಸುವ 'ದೇಶಪ್ರೇಮಿ ಸುರುಪುರ ನಾಯಕ' ನಾಟಕ 'ರಂಗ ನಿರಂತರ' ತಂಡದಿಂದ ಜ. ೨೮ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಯಿತು.

ಇತಿಹಾಸವನ್ನು ಉತ್ತಮ ನಾಟಕವನ್ನಾಗಿ ಕಟ್ಟುವಾಗ ಎದುರಾಗುವ ತೊಡಕುಗಳನ್ನು ವಹಿಸಬೇಕಾದ ಎಚ್ಚರವನ್ನು ಕವಿ ಕೆ.ಎಂ. ಮುನಿಕೃಷ್ಣಪ್ಪ ತಮ್ಮ ಈ ಮೊದಲ ಪ್ರಯತ್ನದಲ್ಲಿ ತಕ್ಕ ಮಟ್ಟಿಗೆ ಚೊಕ್ಕಟವಾಗಿಯೇ ನಿರ್ವಹಿಸಿದ್ದಾರೆ. ಕಾಲಜ್ಞಾನಿ ಹಾಗೂ ಸುಡುಗಾಡು ಸಿದ್ಧರ ಭವಿಷ್ಯವಾಣಿ ತಂತ್ರದಲ್ಲೇ ನಾಟಕದ ನಿರೂಪಣೆ ಮಾಡಿದ್ದು ಸಮರ್ಪಕವೆನಿಸುತ್ತದೆಯಾದರೂ ಈ ಅಳವಡಿಕೆಯಲ್ಲಿ ಹಿತಮಿತ ಇಲ್ಲದಾಗಿದೆ. ಮೊದಲ (ಲಂಬಿತ) ದೃಶ್ಯದಲ್ಲೇ ಸಾಕಷ್ಟು ಪುನರಾವರ್ತನೆಯಿದೆ. ಮುಂದಿನ ಒಂದೆರಡು ದೃಶ್ಯಂತರಗಳಲ್ಲಿ ಬರುವ ಇವರ ಪ್ರವೇಶವೂ ಕಿರಿಕಿರಿಯೇ ಎನಿಸುತ್ತದೆ. ದಕ್ಷಿಣದ ರಾಜರು-ಸಾಮಂತರುಗಳನ್ನು ಬ್ರಿಟಿಷ್‌ರ ವಿರುದ್ಧ ಸಿಡಿದೇಳಲು ವೆಂಕಟಪ್ಪ ನಾಯಕ ಪ್ರೇರೇಪಿಸಿದ ನಂತರದ ಘಟನೆಯನ್ನು (ಸ್ಥಿತಿ-ಗತಿಯನ್ನು) ಕಂಸಾಳೆಯ ಮೂಲಕ ಈ ನಿರೂಪಕರೂ ವಿವರಿಸುವ ದೃಶ್ಯ ಮಾತ್ರ ಸಂದರ್ಭೋಚಿತವಾಗಿ ಕಳೆ ಕಟ್ಟುವ ಮೂಲಕ ಸಾರ್ಥಕವೆನಿಸಿಕೊಳ್ಳುತ್ತದೆ. ಹೀಗಾಗಿ ಈ ನಿರೂಪಕರ ಬಳಕೆಯಲ್ಲಿ ಅರ್ಥಪೂರ್ಣ ನಿಯಂತ್ರಣ ನಾಟಕೀಯ ಘಟನೆಗಳನ್ನು ದೃಶ್ಯಗಳನ್ನಾಗಿಸುವ ಜಾಣ್ಮೆ ವೆಂಕಟಪ್ಪ ನಾಯಕನ ಉದ್ದುದದ ಭಾಷಣ ರೂಪದ ಸಂಭಾಷಣೆಗೆ ಕಡಿವಾಣ-ಈ ಅಂಶಗಳತ್ತ ನಾಟಕಕಾರರು ಹೆಚ್ಚಿನ ಗಮನ ಕೊಟ್ಟಿದ್ದರೆ ಇದೊಂದು ಇತಿಹಾಸ ನಿರೂಪಣೆಯ ಕಥನ ಮಾತ್ರವಾಗದೇ ನಾಟಕೀಯ ಸತ್ವದಿಂದಲೂ ಇನ್ನೂ ಹೆಚ್ಚಿನ ಮಹತ್ವ ಪಡೆಯುತ್ತಿತ್ತು. ಫ್ಲಾಷ್ ಬ್ಯಾಕ್ ತಂತ್ರದ ಮೂಲಕ ಪ್ರಯತ್ನ ಮಾಡಲಾಗಿದೆಯಾದರೂ ಇವು ಕೃತಿಯ ಒಡಲಿಂದ ಬಂದಷ್ಟು ಗಾಢವಾಗಿಲ್ಲ. ಭಾಷೆಯ ಬಳಕೆಯಲ್ಲೂ ಕಾಲಜ್ಞಾನಿಯ ಮಾತುಗಳಿಗೆ ದೊರಕಿರುವ ತೂಕ ನಾಟಕದ ಮಿಕ್ಕ ಪಾತ್ರಗಳಿಗೂ ದೊರಕಿದ್ದರೆ ಕೃತಿಯ ಸತ್ವ ಇನ್ನೂ ಹೆಚ್ಚುತ್ತಿತ್ತು.

'ರಂಗ ನಿರಂತರ'ದ ಮೂಲಕ ರಂಗ ನಟನಾ ತರಬೇತಿ ಶಿಬಿರವೊಂದನ್ನು ಆಯೋಜಿಸಿ, ಈ ಶಿಬಿರಾರ್ಥಿಗಳಿಗಾಗಿಯೇ ಪ್ರಸ್ತುತ ಪ್ರಯೋಗವನ್ನು ನಿರ್ದೇಶಿಸಿರುವ (ಸಿದ್ಧಗೊಳಿಸಿರುವ) ಸಿ.ಜಿ.ಕೆ. ತಮ್ಮ ಎಂದಿನ ತಾಂತ್ರಿಕ ಸಮೃದ್ಧಿ ಮೆರಗಿನ ಛಾಪನ್ನು ಮುಂದುವರಿಸಿಕೊಂಡ ಬಂದಿದ್ದಾರೆ. ಹತ್ತು ವರ್ಷಗಳ ನಂತರ ರಂಗಕ್ಕೆ ಮರಳಿರುವ ಶಶಿಧರ್ ಅಡಪ (ಜಯದೇವ್‌ರೊಂದಿಗೆ) ಅವರ ರಂಗ ವಿನ್ಯಾಸದಲ್ಲಿ (ಅರಮನೆ, ಆಂಜನೇಯನ ಪ್ರತಿಮೆ, ವೀರಗಲ್ಲು) ವಿಶಿಷ್ಟ ಮೋಹಕ ಮೆರಗಿದೆ. ಅಂತೆಯೇ ರಮೇಶ್-ವಿಶ್ವನಾಥ್‌ರ ಬೆಳಕಿನ ಸಂಯೋಜನೆಯೂ ಪ್ರಭಾವಿ.

ಅಭಿನಯ ವಿಭಾಗದಲ್ಲೂ 'ತರಬೇತಿ ಶಿಬಿರಾರ್ಥಿಗಳಿವರು' ಎಂಬ ಔದಾರ್ಯವನ್ನೇನೂ ಪಾತ್ರಧಾರಿಗಳು ಬೇಡುವುದಿಲ್ಲ. ಮೆಡೋಸ್ ಟೇಲರ್ (ಕೃಷ್ಣೇಗೌಡ, ವಿಜಯ್) ಆಕರ್ಷಕ ನಿಲುವು. ಉತ್ತಮ ಮಾತುಗಾರಿಕೆಯಿಂದ ಥಕ್ಕನೇ ಗಮನ ಸೆಳೆಯುತ್ತಾರೆ. ಕಾಲಜ್ಞಾನಿ (ಮುರಡಯ್ಯ) ಸುಡುಗಾಡು ಸಿದ್ಧ (ತಲೆಗೆ ಬಟ್ಟೆ ಕಟ್ಟುವುದಕ್ಕಿಂತ ಪೇಟ ಇಡುವುದು ಸೂಕ್ತ) ಪಾತ್ರದ ಶಿವಕುಮಾರ್ ಉತ್ತಮ ಶಾರೀರ ಸ್ಪಷ್ಟ ಮಾತುಗಳಿಂದ ನಿರೂಪಣೆಯ ಹೊಣೆಯನ್ನು ಲೀಲಾಜಾಲವಾಗಿ ನಿರ್ವಹಿಸಿದರು. ಮುಖ್ಯ ಪಾತ್ರಧಾರಿ ವೆಂಕಟಪ್ಪ ನಾಯಕ (ಮಂಜುನಾಥ್) ಅಬ್ಬರ, ಅರಚಾಟ, ಸಿಡುಕುತನಗಳನ್ನು ಕಡಿಮೆ ಮಾಡಿಕೊಳ್ಳುವುದು ಸೂಕ್ತ. ದಿವಾನ (ವಿನಾಯಕ ಜೋಷಿ) ಪಾತ್ರ ಮಾತ್ರ ವಿದೂಷಕನಂತೆ ಮೂಡಿಬಂದಿದೆ.

ಬಿಚ್ಚುಗತ್ತಿಯ (ಚಾಕು ಬಳಸಲಾಗಿತ್ತು) ಮೇಲೆ ಮಗು-ವೆಂಕಟಪ್ಪನನ್ನು ಮಲಗಿಸುವ ದೃಶ್ಯ : ದೊರೆ ವೆಂಕಟಪ್ಪನಿಗೆ ಬ್ರಿಟಿಷರ ವಿರುದ್ಧ ಹೋರಾಡಲು ಹಣದ ಅಡಚಣೆಯಾದಾಗ ಮುಕುಟವನ್ನು ಒತ್ತೆ ಇಡುವ ದೃಶ್ಯ, ರಣಾಂಗಣದಲ್ಲಿ ವೆಂಕಟಪ್ಪ-ಟೇಲರ್‌ರ (ಹಿನ್ನೆಲೆಯಲ್ಲಿ ಬಳಸಲಾದ ಸ್ಲೈಡ್-ಎಫೆಕ್ಟ್ ಭವ್ಯವಾಗಿತ್ತು) ಮುಖಾಮುಖಿ ಸೆಣಸಾಟದ ದೃಶ್ಯಗಳು ಈ ಪ್ರಯೋಗದ ಸ್ಮರಣೀಯ ದೃಶ್ಯಗಳಾಗಿ ಮೂಡಿಬಂದವು. ಹಾಗೆಯೇ ಮೆಡೋಸ್ ಟೇಲರ್ ಹಾಗೂ ಕನಕಜ್ಜರಿಗೆ ಮಾಡಲಾದ ಪ್ರಸಾಧನ(ಗ್ರೀನ್ ರೂಂ ನಾಣಿ)ವೂ ಉಲ್ಲೇಖನೀಯ.

**ಪ್ರಜಾವಾಣಿ**

# ಅನುಬಂಧ

**ಸಿಜಿಕೆ ಕೆಲವು ವಿವರಗಳು**

ಹುಟ್ಟಿದ ಸ್ಥಳ : ಮಂಡ್ಯ, ಕರ್ನಾಟಕ ರಾಜ್ಯ

ಹುಟ್ಟಿದ ದಿನಾಂಕ : ೨೭ ಜೂನ್ ೧೯೫೦

ವಿದ್ಯಾರ್ಹತೆ : ಬಿ.ಎ. (ಆನರ್ಸ್) ಎಂ.ಎ. (ಅರ್ಥಶಾಸ್ತ್ರ)

ಉದ್ಯೋಗ : **ನಿರ್ದೇಶಕರು,**ಗಾಂಧಿ ಅಧ್ಯಯನ ಕೇಂದ್ರ, ಗಾಂಧಿಭವನ
**ಪ್ರಾಧ್ಯಾಪಕರು,**ಅರ್ಥಶಾಸ್ತ್ರ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬೦ ೦೫೬

ವಾಸ : ಪಿ. ೫, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬೦ ೦೫೬

**ಪಡೆದುಕೊಂಡಿರುವ ಪ್ರಶಸ್ತಿಗಳು/ಗೌರವಗಳು**

- ೧೯೯೫-೯೬ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
- ೧೯೯೦ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ
- ರಶಿಯದ ಲೆನಿನ್‌ಗ್ರಾಡ್‌ನಲ್ಲಿ ಜರುಗಿದ ಸ್ಟಾನಿಸ್ಲೋವಸ್ಕಿ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣ (೧೯೮೮)ದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

- ನವದೆಹಲಿಯ ಸಂಗೀತ ನಾಟಕ ಅಕಾಡೆಮಿಯು ಏರ್ಪಡಿಸಿದ್ದ ದಕ್ಷಿಣ ವಲಯ ರಂಗೋತ್ಸವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು.
- ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕ.
- ೨೦೦೩ನೇ ಸಾಲಿನ ಶಿವರಾಮ ಕಾರಂತ ಪ್ರಶಸ್ತಿ
- ೨೦೦೩-೪ನೇ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಸಂಘಟಕರಾಗಿ ದುಡಿದಿರುವುದು**

- 'ಸಮುದಾಯ' ತಂಡದ ಸಂಸ್ಥಾಪಕ ಕಾರ್ಯದರ್ಶಿ
- ಶ್ರೀಮತಿ ಇಂದಿರಾಗಾಂಧಿಯವರು ಸ್ಪರ್ಧಿಸಿದ್ಧ ಚಿಕ್ಕಮಗಳೂರು ಚುನಾವಣೆ ಸಂದರ್ಭದಲ್ಲಿ ಫ್ಯಾಸಿಸ್ಟ್ ವಿರೋಧಿ ಸಾಂಸ್ಕೃತಿಕ ರ್‍ಯಾಲಿ ಆಯೋಜಿಸಿದ್ದು.
- ಪ್ರಗತಿಪರ ಹಾಗೂ ವೈಜ್ಞಾನಿಕ ಸಂಸ್ಕೃತಿಯನ್ನು ಹರಡಲು ಕರ್ನಾಟಕದಾದ್ಯಂತ ೩೦ ದಿನಗಳ ಎರಡು ಸಾಂಸ್ಕೃತಿಕ ಜಾತಾಗಳನ್ನು ಏರ್ಪಡಿಸಿದ್ದು.
- ರಂಗಭೂಮಿ ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸಲು ಹುಟ್ಟಿಕೊಂಡ "ರಂಗಭೂಮಿ ಕ್ರಿಯಾ ಸಮಿತಿ"ಯ ಸಂಸ್ಥಾಪಕ ಕಾರ್ಯದರ್ಶಿ.
- 'ರಂಗನಿರಂತರ' ತಂಡದ ಸಂಸ್ಥಾಪಕ ಅಧ್ಯಕ್ಷ-೧೯೮೨.
- ಬೆಂಗಳೂರಿನಲ್ಲಿ ಮೊದಲ ಬಾರಿಗೆ ೧೫೦ ದಿನಗಳ ಆಪ್ತ ರಂಗಭೂಮಿ ಕಾರ್ಯಕ್ರಮ ಏರ್ಪಡಿಸಿದ್ದು.
- ೧೯೯೦ರಲ್ಲಿ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ೧೦ ದಿನಗಳ ಯುವ ನಾಟಕ ರಚನೆಕಾರರು ಹಾಗೂ ಯುವ ನಿರ್ದೇಶಕರುಗಳ ಉತ್ಸವ ಏರ್ಪಡಿಸಿದ್ದು.
- ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೆ ೩೦ ವರ್ಷಗಳಾದಾಗ ಸಾಂಸ್ಕೃತಿಕ ಉತ್ಸವ ಏರ್ಪಡಿಸಿದ್ದು.
- ಬಂಡಾಯ ಸಾಹಿತ್ಯ ಸಂಘಟನೆಯ ಸಂಸ್ಥಾಪಕ ಕಾರ್ಯದರ್ಶಿ.
- ಕಾರ್ಯದರ್ಶಿ, ಕರ್ನಾಟಕ ರಂಗ ಕುಶಲಕರ್ಮಿಗಳ ಸಂಘ.

**ನಾಟಕ ರಚನೆಕಾರ ಮತ್ತು ನಿರ್ದೇಶಕರಾಗಿ**

- "ಬೆಲ್ಚಿ" ಬಿಹಾರದಲ್ಲಿ ದಲಿತರ ಮೇಲೆ ಜರುಗಿದ ಹಲ್ಲೆಯನ್ನು ಆಧರಿಸಿ ರಚಿಸಿದ ನಾಟಕ. ಸಮುದಾಯ ತಂಡವು ಈ ನಾಟಕವನ್ನು ರಾಷ್ಟ್ರಾದ್ಯಂತ ೨೦೦೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ.
- "ಸೈಕ್ಲೋನ್", ೧೯೭೮ರಲ್ಲಿ ದಕ್ಷಿಣ ಭಾರತದಲ್ಲಿ ಚಂಡಮಾರುತದಿಂದುಂಟಾದ ಹಾನಿಯನ್ನು ಕುರಿತಂತೆ ರಚಿಸಲಾದ ನಾಟಕ. ಈ ನಾಟಕವು ರಾಜಕೀಯ ಪಕ್ಷಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಆ ಸಂದರ್ಭದಲ್ಲಿ ಮಾಡಿಕೊಂಡ ಲಾಭ ಕುರಿತದ್ದಾಗಿತ್ತು.
- "ಪಂಚ ತಂತ್ರ" - ಹೋಟಲು ಕಾರ್ಮಿಕರ ಸಮಸ್ಯೆಯನ್ನು ಆಧರಿಸಿದ್ದು. ಹೋಟಲು ಕಾರ್ಮಿಕರಿಂದಲೇ ಅಭಿನಯಿಸಲ್ಪಟ್ಟಿತ್ತು.
- "ಭಾರತ ದರ್ಶನ" ನಕ್ಸಲೀಯರ ಕೊಲೆಗಳ ಬಗ್ಗೆ ನ್ಯಾಯಮೂರ್ತಿ ತಾರ್ಕುಂಡೆಯವರ ವರದಿಯನ್ನು ಆಧರಿಸಿ ರಚಿಸಿದ ನಾಟಕ.
- "ಮೇ ಡೇ" ಕೆಂಬಾವುಟ ಉದಯವನ್ನಾಧರಿಸಿದ್ದು.

- "ಅಬೋಲಿನ" ಯಶವಂತ ಚಿತ್ತಾಲರ ಸಣ್ಣ ಕತೆಯನ್ನು ಆಧರಿಸಿದ್ದು.
- "ಕಳ್ಳಿಯಲ್ಲಿ ಕೆಂಪು ಹೂವು" ಕೇಶವರೆಡ್ಡಿ ಹಂದ್ರಾಳ ಅವರ ಸಣ್ಣ ಕತೆಯನ್ನು ಆಧರಿಸಿದ್ದು.
- "ಒಡಲಾಳ"- ದೇವನೂರು ಮಹಾದೇವ ಅವರ ಕತೆಯನ್ನು ಆಧರಿಸಿದ್ದು. ಇದು ಕನ್ನಡ ರಂಗಭೂಮಿ ಇತಿಹಾಸದಲ್ಲಿ ಒಂದು ಗಮನಾರ್ಹವಾದ ನಾಟಕ.

**ನಿರ್ದೇಶಕರಾಗಿ**

ಕುಸುಮಬಾಲೆ; ರಚನೆ : ದೇವನೂರು ಮಹಾದೇವ
ಸನ್ನಿವೇಶ; ರಚನೆ : ಬಿ.ವಿ. ವೈಕುಂಠರಾಜು
ಮಹಾಚೈತ್ರ; ರಚನೆ : ಹೆಚ್.ಎಸ್. ಶಿವಪ್ರಕಾಶ್
ಸುಲ್ತಾನ್ ಟಿಪ್ಪು; ರಚನೆ : ಹೆಚ್.ಎಸ್. ಶಿವಪ್ರಕಾಶ್
ಶೇಕ್ಸ್‌ಪಿಯರನ ಸ್ವಪ್ನ ನೌಕೆ; ರಚನೆ : ಹೆಚ್.ಎಸ್. ಶಿವಪ್ರಕಾಶ್
ನೀಗಿಕೊಂಡ ಸಂಸ; ರಚನೆ : ಕಿ.ರಂ. ನಾಗರಾಜ್
ಕಾಲಜ್ಞಾನಿ ಕನಕ; ರಚನೆ : ಕಿ.ರಂ. ನಾಗರಾಜ್
ಪಂಚಮ; ರಚನೆ : ಸಿದ್ಧಲಿಂಗಯ್ಯ
ಚಿಕ್ಕದೇವ ಭೂಪ; ರಚನೆ : ಲಿಂಗದೇವರು ಹಳೆಮನೆ
ಮದರ್ ಕರೇಜ್; ರಚನೆ : ಲಿಂಗದೇವರು ಹಳೆಮನೆ (ಬೆಕ್ಟ್‌ನ ಮದರ್‌ಕರೇಜ್ ಆಧರಿಸಿದ್ದು)
ಫಾದರ್; ರಚನೆ : ಕೆ.ಎಂ. ನಾಗಣ್ಣ (ಸ್ಟ್ರಿನ್‌ಬರ್ಗ್‌ನ ಫಾದರ್ ಆಧರಿಸಿದ್ದು)
ಒಥಲೊ, ಜ್ಯೂಲಿಯಸ್ ಸೀಸರ್; ಅನು : ಕೆ.ಎಸ್. ಭಗವಾನ್ (ಶೇಕ್ಸ್‌ಪಿಯರ್‌ನ ಕೃತಿಗಳು)
ತುಘಲಕ್; ರಚನೆ : ಗಿರೀಶ್ ಕಾರ್ನಾಡ್
ತಬರನಕತೆ; ರಂಗರೂಪ : ಆರ್. ನಾಗೇಶ್ (ಪೂರ್ಣಚಂದ್ರ ತೇಜಸ್ವಿಯವರ ಕಥೆ ಆಧರಿಸಿದ್ದು)
ಯಯಾತಿ; ರಚನೆ : ಗಿರೀಶ್ ಕಾರ್ನಾಡ್
ಮತ್ತೆ ಮೊಹೆಂಜದಾರೊ; ರಚನೆ : ಪಾಲ್ ಸುದರ್ಶನ್, ಸಿಜಿಕೆ.
ವೈಶಂಪಾಯನ ತೀರ; ರಚನೆ : ಎಲ್.ಎನ್. ಮುಕುಂದರಾಜ್ (ಮಹಾಬಲಮೂರ್ತಿ ಕೊಡ್ಲೆಕೆರೆಯವರ ಸಣ್ಣಕತೆಯನ್ನು ಆಧರಿಸಿದ್ದು)
ಬೇಲಿ ಮತ್ತು ಹೊಲ; ರಚನೆ : ಕುಂ. ವೀರಭದ್ರಪ್ಪ
ದೇಶಪ್ರೇಮಿ ಸುರಪುರ ನಾಯಕ; ರಚನೆ : ಕೆ.ಎಂ. ಮುನಿಕೃಷ್ಣಪ್ಪ.

**ರಂಗತರಬೇತಿ/ಕಾರ್ಯಾಗಾರಗಳ ನಿರ್ದೇಶಕರಾಗಿ**

ಕೆ.ಜಿ.ಎಫ್‌ನ ಬಿ.ಇ.ಎಂ.ಎಲ್.ನಲ್ಲಿ
ಬೆಂಗಳೂರಿನ ಮೈಕೋದಲ್ಲಿ
ಬೆಂಗಳೂರಿನ ಎನ್.ಜಿ.ಇ.ಎಫ್.ನಲ್ಲಿ

‘ಪ್ರಯೋಗರಂಗ’ ಆಶ್ರಯದಲ್ಲಿ ಜರುಗಿದ ವಿದ್ಯಾರ್ಥಿ ಕಾರ್ಯಾಗಾರ
ಸಂಚಯ, ಸೂತ್ರಧಾರ, ರಂಗಸಂಪದ, ರಂಗನಿರಂತರ, ಮೈಸೂರಿನ ಸಮುದಾಯ, ಪೊನ್ನಂಪೇಟೆಯ ಸೃಷ್ಟಿ ಕೊಡಗು ರಂಗ
ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಿಗಾಗಿ ಜರುಗಿದ ಕಾರ್ಯಾಗಾರ
ಕರ್ನಾಟಕ ನಾಟಕ ಅಕಾಡೆಮಿ ಏರ್ಪಡಿಸಿದ್ದ ಹಿನ್ನೆಲೆ ರಂಗಕರ್ಮಿಗಳ ಕಾರ್ಯಾಗಾರ

**ಚಲನಚಿತ್ರಗಳ ನಂಟು**

‘ಭುಜಂಗಯ್ಯನ ದಶಾವತಾರಗಳು’ ಪ್ರಶಸ್ತಿ ವಿಜೇತ ಚಿತ್ರದ ಸಹ ನಿರ್ದೇಶಕ ಹಾಗೂ ಸಂಭಾಷಣೆ ರಚನೆ
‘ವೀರಪ್ಪನ್’ ಪ್ರಶಸ್ತಿ ವಿಜೇತ ಚಿತ್ರಕ್ಕಾಗಿ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ರಚನೆ
‘ಸಾಂಗ್ಲಿಯಾನ’ ಚಿತ್ರಕ್ಕೆ ಸಂಭಾಷಣೆ ರಚಿಸಿದ್ದು

**ಬೆಳಕು ವಿನ್ಯಾಸಕರರಾಗಿ**

ಬೆಂಗಳೂರು ಸುಚಿತ್ರ ಫಿಲಂ ಸೊಸೈಟಿಯ ಪೀರ್ ರಂಗಮಂದಿರ ವಿನ್ಯಾಸ ರೂಪಿಸಿದ್ದು
ಮಂಡ್ಯದ ಕೆ.ವಿ. ಶಂಕರೇಗೌಡ ಸಂಭಾಗಣದ ವಿನ್ಯಾಸ ರೂಪಿಸಿದ್ದು
ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡಕ್ಕೆ ಬೆಳಕು ವಿನ್ಯಾಸ ಹಾಗೂ ಸಭಾಂಗಣಕ್ಕೆ ಬೆಳಕು ಮತ್ತು ಧ್ವನಿ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿದ್ದು.

***